ಯಕ್ಷಗಾನ ಪ್ರಸಂಗ

ಅಂಧಕ ಮೋಕ್ಷ

ಕವಿ

ಡಾ. ಅಮೃತ ಸೋಮೇಶ್ವರ

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಸೆಪ್ಟೆಂಬರ್ ೨೭, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಸಾರಾಂಶ

ಪ್ರಸಂಗ ವಿಧ:

ಪೌರಾಣಿಕ

ಆಧಾರ ಗ್ರಂಥ:

ತಿಳಿದಿಲ್ಲ

ಭಾಷೆ:

ಕನ್ನಡ

ಹಿಂದಿನ ಪ್ರಕಾಶನಗಳ ವಿವರ:

ಪ್ರಕೃತಿ ಪ್ರಕಾಶನ, ಕೋಟೆಕಾರು, ೧೯೯೦

ಹಕ್ಕುಸ್ವಾಮ್ಯ ವಿವರ:

ಒಟ್ಟು ಪದ್ಯಗಳು:

೩೧೧

ಪಾತ್ರಗಳು:

ಪರಮೇಶ್ವರ, ಲೋಪಾಮುದ್ರೆ (ಅಗಸ್ತ್ಯ ಪತ್ನಿ), ಗಣಪತಿ , ಪಾರ್ವತಿ, ನಂದಿ, ಕೇಶಿನಿ (ಅಂಧಕನ ಹೆಂಡತಿ), ಭ್ರುಕುಟಿ, ಸಖಿಯರು, ನಾರದ, ಜೃಂಭಿಕೆ (ಕೃತ್ಯೆ), ಅಂಧಕ, ವಾತಾಪಿ, ಇಲ್ವಲ, ಶುಕ್ರಾಚಾರ್ಯ, ಬ್ರಹ್ಮ, ಅಗಸ್ತ್ಯ, ವಿಭ್ರಾಜಿತ (ವಿದರ್ಭ ರಾಜ), ಇಂದ್ರ, ಇಂದ್ರ ಬಲ, ಕಾಲಕೇತು, ಕಾಲ ಕೌತುಕ, ಕಾಲನೇಮಿ, ಕಾಲಮುಖ, ವಿಷ್ಣು, ವಿಭಾವಸು (ಯಕ್ಷ), ಮೂಷಿಕ (ಅಂಧಕನ ಸಖ), ಸುಂದ (ಅಂಧಕನ ಆಪ್ತ), ಭೈರವ, ಕುಮಾರ, ಯಾಜಕರು, ಗಣಗಳು, ಬ್ರಾಹ್ಮಣರು

ಕಥಾ ಸಾರಾಂಶ:

ವಿಪ್ರಚಿತ್ತಿ ದಾನವನ ಮಕ್ಕಳಾದ ಅಂಧಕ, ಇಲ್ವಲ, ವಾತಾಪಿಯರು ಹಿರಣ್ಯಪುರದಲ್ಲಿ ಮೆರೆದಾಡುತ್ತಿರುವರು. ಇಲ್ವಲ - ವಾತಾಪಿಯರನ್ನು ಅಗಸ್ತ್ಯ ಮಹರ್ಷಿಗಳು ನಿಗ್ರಹಿಸಿ, ಅಂಧಕಾಸುರನ ಬಂಧುಗಳಾದ ಕಾಲಕೇಯರನ್ನು ವಧಿಸಲು, ಸಮುದ್ರವನ್ನೇ ಆಪೋಶನಗೈದು ಅಗಸ್ತ್ಯರು ದೇವತೆಗಳಿಗೆ ಸಹಾಯ ಮಾಡುತ್ತಾರೆ.

ಇದರಿಂದ ಕುಪಿತನಾದ ಅಂಧಕನು ಸೇಡುತೀರಿಸಲು ಮುಂದಾದಾಗ ನಾರದರ ಆಗಮನವಾಗಿ ಅವರ ಕೊರಳಲ್ಲಿದ್ದ ಕುಸುಮಮಾಲೆ ಅವನನ್ನು ಆಕರ್ಷಿಸಿ, ಅದನ್ನು ಪಡೆಯಲು ನೈಮಿಷ ಸರೋವರದೆಡೆಗೆ ಬರುವನು. ಅದೇ ವೇಳೆ ಅಲ್ಲಿಗೆ ಜಲಕೇಳಿಗಾಗಿ ಬಂದ ಪಾರ್ವತೀದೇವಿಯನ್ನು ನೋಡಿ ಮೋಹಿಸುವನು. ಪಾರ್ವತೀದೇವಿ ತಿರಸ್ಕರಿಸಲು ಅವಳನ್ನು ಪಡೆದೇ ತೀರಲು ಅಂಧಕನು ಸುಂದನೆಂಬ ಅಸುರನನ್ನು ಶಿವನಲ್ಲಿಗೆ ಕಳುಹಿಸಿ, ಪಾರ್ವತಿಯನ್ನು ತನಗೊಪ್ಪಿಸಲು ಹೇಳುವನು. ಆಗ ಯುದ್ಧದಲ್ಲಿ ತನ್ನನ್ನು ಜಯಿಸಿ ಶಿವೆಯನ್ನು ಪಡೆಯಲಿ ಎಂದು ಶಿವ ಹೇಳಲು, ಅಂಧಕನು ಯುದ್ಧಕ್ಕೆ ಸಿದ್ಧನಾಗುವನು. ವಿಷ್ಣುವಿತ್ತ ಶುಷ್ಕರೇವತೀ ಅಸ್ತ್ರದಿಂದ ಅಸುರನ ದೇಹದ ರಕ್ತಮಾಂಸಾದಿಗಳನ್ನು ಶಿವ ಬತ್ತಿಸಲು, ಅಂಧಕನಿಗೆ ಜ್ಞಾನೋದಯವಾಗಿ ಕ್ಷಮೆ ಯಾಚಿಸಿ, ಭೃಂಗಿಯೆಂಬ ಅಭಿಧಾನದಿಂದ ಶಿವಗಣರಲ್ಲಿ ಒಬ್ಬನಾಗುವ ಕಥಾನಕ.

ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)

ಡಾ. ಅಮೃತ ಸೋಮೇಶ್ವರರವರು ೧೯೩೫ರಲ್ಲಿ ಮಂಗಳೂರು ಸಮೀಪದ ಕೋಟೆಕಾರು ಗ್ರಾಮದ ಅಡ್ಕದಲ್ಲಿ ಜನಿಸಿದರು. ತಂದೆ ಚಿರಿಯಂಡ, ತಾಯಿ ಅಮ್ಮುಣಿ. ಅಮೃತ ಸೋಮೇಶ್ವರ ತುಳುನಾಡಿನ ಒರ್ವ ಸಾಹಿತಿ, ಹಿರಿಯ ಜಾನಪದ ವಿದ್ವಾಂಸ, ಕಾವ್ಯ, ಸಣ್ಣಕತೆ, ನಾಟಕ, ಯಕ್ಷಗಾನ, ವಿಮರ್ಶೆ ಮತ್ತು ಜಾನಪದ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸ ಮಾಡಿದವರು. ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಅಖಿಲ ಭಾರತ ತುಳು ಸಮ್ಮೇಳನದ ಅಧ್ಯಕ್ಷತೆ, ರಾಜ್ಯೋತ್ಸವ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ, ಪಾರ್ತಿಸುಬ್ಬ ಪ್ರಶಸ್ತಿ ಮುಂತಾದ ಗೌರವಗಳಿಗೆ ಭಾಜನರು. ಎಲೆಗಿಳಿ, ರುದ್ರಶಿಲೆಸಾಕ್ಷಿ, ವನಮಾಲೆ, ಭ್ರಮಣ, ಉಪ್ಪುಗಾಳಿ, ಯಕ್ಷಾಂದೋಳ, ಬಾಮಕುಮಾರ ಸಂಧಿ, ಕಾಲೆವಾಲ, ಅಪಾರ್ಥಿನಿ ಮುಂತಾದ ಹಲವು ಸಾಹಿತ್ಯಕೃತಿಗಳ ಕರ್ತೃ. ತುಳು ನಿಘಂಟು ಯೋಜನೆಯ ಸಲಹಾ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಮರಶಿಲ್ಪಿ ವೀರಕಲ್ಕುಡ, ಸಹಸ್ರಕವಚಮೋಕ್ಷ, ಕಾಯಕಲ್ಪ, ಪುತ್ತೂರಮುತ್ತು, ಅಮರವಾಹಿನಿ, ತ್ರಿಪುರ ಮಥನ, ಮಹಾಕಲಿ ಮಗಧೇಂದ್ರ, ವಂಶವಾಹಿನಿ, ಮಹಾಶೂರ ಭೌಮಾಸುರ, ಚಕ್ರವರ್ತಿ ದಶರಥ, ಚಂದ್ರಮತೀಸ್ವಯಂವರ, ವರುಣಯಾಗ, ಸಾರ್ವಭೌಮ ಸಹಸ್ರಾನೀಕ, ಚಾಲುಕ್ಯ ಚಕ್ರೇಶ್ವರ, ಅಂಧಕಮೋಕ್ಷ, ಘೋರ ಮಾರಕ, ಮಾರಿಷಾಕಲ್ಯಾಣ, ಅಂಗುಲಿಮಾಲಾ, ಅಮರವೀರದ್ವಯ ಕೋಟಿಚೆನ್ನಯ, ಅರುಣ ಸಾರಥ್ಯ, ಋಷ್ಯಶೃಂಗ, ತನಿಯ – ಗುರುವರ ಕಾಳಗ, ಪ್ರಜ್ಞಾವಿಜಯ, ಭುವನಭಾಗ್ಯ, ಮದಿರಾಸುರ ಮರ್ದನ, ಮಿತ್ರಭೇದ, ವಿದ್ಯಾವಿಜಯ, ಶ್ರೀದೇವಿಭಗವತಿ, ಸಂಗ್ಯಾ ಬಾಳ್ಯಾ, ಸತ್ಯನಾಪುರದ ಸಿರಿ, ಸಿರಿರಾಮ ಪಾದುಕೆ, ರುಧಿರ ಮೋಹಿನಿ.

ಟಿಪ್ಪಣಿ:

ಹೆಚ್ಚು ಪ್ರಚಲಿತದಲ್ಲಿರುವ ಪ್ರಸಂಗ.

ಪ್ರಸಂಗ ಸಾಹಿತ್ಯ

ಭಾಮಿನಿ
ಜಗದೊಳಿಹ ಸಚರಾಚರಂಗಳ |
ಮಿಗೆ ವಿನೋದದಿ ಕಟ್ಟಿ ಕುಣಿಸುವ |
ವಿಗಡ ಲೀಲಾಮೂರ್ತಿಯಹ ನಟರಾಜ ತಾನೊಲಿದು ||
ಸೊಗದಿ ಪದವಿಟ್ಟೈದೆಯ ರಂಗದಿ |
ನಗುನಗುತ ನರ್ತಿಸುತ ದುರಿತದ |
ಬಗೆಯ ಮರ್ದಿಸುತಂಧಕಾರವ ನೀಗಿಸುಗೆ ದಯದಿ || ೧ || 1 ||

ಕೈಲಾಸದಲ್ಲಿ ಶಿವನಾಟ್ಯ

ನಾಟಿ – ತ್ರಿವುಡೆ **(ಸೌರಾಷ್ಟ್ರ - ತ್ರಿವುಡೆ)**
ಒಂದು ದಿನ ಕೈಲಾಸ ಧಾಮದೊ |
ಳಿಂದುಧರ ಶಿವೆ ಸಹಿತ ಗಣಗಳ |
ಸಂದಣಿಯನೊಡಗೂಡಿ ಪರಮಾ | ನಂದದಿಂದ || ೧ ||

ಮೇಳಕೊದಗುವ ಗಾನವಾದನ |
ತಾಳಲಯದ ವಿಡಾಯವೊಪ್ಪಿರೆ |
ಶೂಲಿ ನರ್ತನ ಗೈಯುತಿರ್ದನು | ಲೀಲೆಯಿಂದ || ೨ ||

ನಂದಿ ಗಜಮುಖ ಸ್ಕಂದ ಭೃಕುಟಿಗ |
ಳಂದು ನಾಟ್ಯವಿನೋದ ಮಗ್ನತೆ |
ಯಿಂದಿರಲು ಜಗವದ್ದಿದುದು ರಸ | ಸಿಂಧುವಿನಲಿ || ೩ || 4 ||

ಖಮಾಚ್ - ಆದಿ
ಹರನಾಡಿದ ಶಂಕರನಾಡಿದ ಭವ |
ಹರನಾಡಿದ ತುಹಿನಾದ್ರಿಯೊಳು ||
ಪುರಹರ ಶಶಿಧರ ಸ್ಮರಹರ ಕರುಣಾ |
ಕರನಾಡಿದನುಲ್ಲಾಸದೊಳು || ೧ ||

ಮುರಜ ಮೃದಂಗ ಡೋಲಕ ಶಂಖ |
ಮುರಲಿ ಪಟಹ ವೀಣಾದಿಗಳ ||
ಸುರುಚಿರ ಘೋಷಕ್ಕೆರಕವಾಗಿ ನವ |
ತರದಲಿ ಗೈದರು ನಾಟ್ಯಗಳ || ೨ ||

ಸತಿ ಪಾರ್ವತಿ ಸುತರಹ ಗುಹ ಗಣಪತಿ |
ಜತೆಯೊಳು ನಂದಿ ಭೃಕುಟಿ ಗಣರು ||
ಜತಿಲಯ ತಾಳದ ಗತಿಯನುಸರಿಸುತ |
ಲತುಲಾನಂದದೊಳಾಡಿದರು || ೩ ||

ತಕ್ಕಿಟ ತರಿಕಿಟ ಧೋಂಕಿಟ ತಕಜಣು |
ದಿಕ್ಕಿಟ ತದಗಿಣತೋಯೆಂಬ ||
ಮಿಕ್ಕಿನ ವಾದ್ಯರವಕ್ಕೆ ಸುಮೋದವು |
ಉಕ್ಕುತಿರಲು ನಲಿದನು ಸಾಂಬ || ೪ || 8 ||

ನಾರದನ ಆಗಮನ

ಭಾಮಿನಿ
ಈ ತೆರದಿ ಕೈಲಾಸವೇ ನೃ |
ತ್ಯಾತಿಶಯದಲಿ ಮೈಯ ಮರೆತಿರೆ |
ಭೂತನಾಥನ ನುತಿಸುತಲ್ಲಿಗೆ ಬಂದ ಸುರಮುನಿಪ ||
ನೂತನದ ಗಣನಾಟ್ಯವನು ತಾ |
ನೋತು ನೋಡುತ ನಿಂದನಲ್ಲಿಯೆ |
ಮಾತನುಳಿದಾನಂದ ರಸವಾಸ್ವಾದಿಸುತಲಂದು || ೧ || 9 ||

ಸಾಂಗತ್ಯ - ರೂಪಕ
ನರ್ತನ ಕೊನೆಗೊಳೆ ನಟರಾಜ ತನ್ನನು |
ಕೀರ್ತಿಪ ಮುನಿಪನ ಕಂಡು ||
ಅರ್ತಿಯಿಂ ಮನ್ನಿಸಿ ಆತಿಥ್ಯ ಸತ್ಕಾರ |
ಕರ್ತವ್ಯಗಳ ಗೈದನಂದು || ೧ ||

ನೃತ್ಯ ಲೀಲೆಯೊಳು ನಾವೆಲ್ಲರು ಮಗ್ನತೆ |
ವೆತ್ತುದರಿಂದ ನೀ ಬಂದ ||
ಹೊತ್ತಿನೊಳಾದರಾತಿಥ್ಯ ಗೈಯದುದಕೆ |
ಚಿತ್ತದಿ ಬದಲೆಣಿಸದಿರು || ೨ ||

ಧನ್ಯನಾದೆನು ಪರಮೇಶ ಕೈಲಾಸದೊ |
ಳನ್ಯನೆ ನಾನದಂತಿರಲಿ ||
ಜನ್ಮ ಸಾರ್ಥಕವಾಯ್ತು ನಿನ್ನ ನಾಟ್ಯವ ಕಂಡ |
ಕಣ್ಣಿನ ಪುಣ್ಯವೆ ಪಿರಿದು || ೩ ||

ಮಾತನೊಂದನು ಕೇಳಲೆಳಸುವೆ ನರ್ತನ |
ವೇತಕೆ ಪ್ರಿಯವದು ನಿನಗೆ ||
ಏತರ ಮಹಿಮೆ ತಾನದರೊಳಗಿರ್ಪುದೆಂ |
ಬಾ ತತ್ವವನ್ನೊರೆಯುವುದು || ೪ || 13 ||

ಬೇಗಡೆ - ತ್ರಿವುಡೆ

ಹರುಷವಾಂತೆನು ದೇವ ಮುನಿವರ್ಯ | ನೀ ಕೇಳ್ದ ಪ್ರಶ್ನೆಗೆ |
ಒರೆಯುವೆನು ಕೇಳಯ್ಯ ಉತ್ತರವ ||
ಸರುವ ಲೋಕ ಸಮೂಹ ಸಚರಾ |
ಚರಗಳೆಲ್ಲವು ನಾಟ್ಯಲಯಗತಿ |
ಭರಿತವಪ್ಪವು ಸೃಷ್ಟಿ ಸ್ಥಿತಿಲಯ |
ದೆರಕವಹುದೈ ವಿಶ್ವ ನಾಟ್ಯವು || ೧ ||

ನಿಶಿ ಹಗಲು ಸುಖ ದುಃಖ ಬಿಳಿ ಕರಿದು | ಸುಕೃತಿಯು ಪಾಪವು |
ಬೆಸೆದುಕೊಂಡಿವೆ ನಾಟ್ಯಲಯಕೊಲಿದು ||
ಎಸೆದ ಲೋಕದ ಲೀಲೆಗಳ ಪ್ರತಿ |
ಮಿಸುವ ನಾಟ್ಯ ತರಂಗವಿದ ನಾ |
ಕುಶಲದಲಿ ನಟಿಸುವೆನು ಕಲೆಗಳ |
ರಸವಿಪಾಕದಿ ನವ ವಿಧಾನದಿ || ೨ || 15 ||

ಭಾಮಿನಿ

ಎಂದುದನು ಕೇಳುತ್ತ ನಾರದ |
ನಂದು ತೋಷವನಾಂತು ಮಣಿಯುತ |
ಲೆಂದನೆಲೆ ನಟರಾಜ ವಿದಿತವದಾಯ್ತು ನಾಟ್ಯಾರ್ಥ ||
ನಂದಿವಾಹನ ಬೆಸಸುವೆನು ಮ |
ತ್ತೊಂದ ನಿನ್ನನು ಭಜಿಪ ದಾನವ |
ವೃಂದವೇತಕೆ ಲೋಕಪೀಡೆಯ ಗೈವುದಿದನರಿಯೆ || ೧ || 16 ||

ಅಭೇರಿ - ರೂಪಕ

ಹರ ನಗುತೆಂದನು ನೋಡಲ್ಕೆ ಭಕ್ತಿಯ |
ಪರಿಯು ತಾನೊಂದಲ್ಲ ಕೇಳು ||
ತರ ತರವಿಹುದು ಸಕಾಮ ನಿಷ್ಕಾಮದೊ |
ಳಿರುವ ಭಕ್ತಿಗೆ ಭಿನ್ನ ಫಲವು || ೧ ||

ಕೆಲಬರು ಖಳರು ಸಕಾಮ ಭಕ್ತಿಯೊಳೆನ್ನ |
ನೊಲಿಪರು ಸ್ವಾರ್ಥ ಸಾಹಸದಿ ||
ಬಲವನ್ನೆ ಮೆರೆಯಿಸಿ ಧರ್ಮವ ಮರೆಯಿಸಿ |
ಅಳಿದರು ಕರ್ಮದ ಫಲದಿ || ೨ ||

ಧರೆಯನ್ನು ಧರಿಸುವ ಧರ್ಮವ ನಿರತ ಉ |
ದ್ಧರಿಸುವುದತಿ ಮುಖ್ಯವೈಸೆ ||
ನೆರೆ ಭಕ್ತರಾದರು ದುರುಳರ ಶಿಕ್ಷಿಸ |
ದಿರಲಾರೆ ದುಷ್ಟತೆಯೆಸಗೆ || ೩ ||

ಮತ್ತೆ ಕೇಳಾ ನಾಕನಿಳಯರಿಗೋರೊರ್ಮೆ |
ಮಸ್ತಕಕಡರಲು ಗರ್ವ ||
ಶಾಸ್ತ್ರಿಯ ಗೈವೆನು ಕಾಲಕಾಲಕೆ ಲೋಕ |
ಸ್ವಾಸ್ಥ್ಯವನುಳಿಸುವ ಬಗೆಗೆ || ೪ ||

ಕಾಲ ಕಾಲನೆ ನಿನ್ನ ಲೀಲಾ ರಹಸ್ಯದ |
ಮೂಲವನರಿಯುವರಾರು ||
ಪಾಲಿಸು ಲೋಕವನೆಂದು ನುತಿಸಿ ಮುನಿ |
ಪಾಲನು ಬೀಳ್ಕೊಂಡನಂದು || ೫ || 21 ||

ಅಂಧಕನ ಒಡ್ಡೋಲಗ

ಸೌರಾಷ್ಟ್ರ - ತ್ರಿವುಡೆ
ಇತ್ತಲೆಸೆವ ಹಿರಣ್ಯಪುರದೊಳು |
ದೈತ್ಯವರನಾ ವಿಪ್ರಚಿತ್ತಿಯ |
ಪುತ್ರನಂಧಕನಖಿಳ ವೈಭವ | ವೆತ್ತು ಮೆರೆದ || ೧ ||

ಅನುಜರಹ ವಾತಾಪಿ ಇಲ್ವಲ |
ದನುಜರಿಂದೊಡಗೂಡಿ ಸಾಹಸ |
ಧನನು ತಾನೆನಿಸಿರ್ದನತಿ ಸಾ | ಧನೆಯ ಗೈದು || ೨ ||

ಅಂಧಕನು ಒಡ್ಡೋಲಗದೊಳಿರೆ |
ಬಂದರಾ ವಾತಾಪಿ ಇಲ್ವಲ |
ರಂದು ಅಗ್ರಜಗೆರಗಿ ಮತ್ತಿಂ | ತೆಂದರಾಗ || ೩ ||

ಅಣ್ಣ ಕೇಳಾ ವಿಪ್ರಚಿತ್ತಿಯ |
ಚಿಣ್ಣರಾಗಿಹ ಎಮ್ಮ ಭಾಗ್ಯವ |
ಬಣ್ಣಿಸುವರಾರಿಹರು ಜಗದಲಿ | ಧನ್ಯರಾವು || ೪ ||

ಧನಕನಕ ವರ ವಸ್ತು ವಾಹನ |
ವೆನಿತಿಹುದೊ ಸೌಭಾಗ್ಯ ಸಾಧನ |
ವೆಣಿಸುವವರಾರುಂಟು ಮಿಗಿಲಾ | ಧನಪನಿಂಗೆ || ೫ ||

ನೋಡಲೇನೋ ಚಿಂತೆ ಮುಖದಲಿ |
ಮೂಡಿದಂತಿದೆ ಎಮ್ಮೊಳದ ನೀ |
ನಾಡಬೇಹುದು ಸೋದರನೆ ತಡ | ಮಾಡದಿಂದು || ೬ ||

ಎಡ ಬಲದ ಭುಜದಂತೆ ನಾವಿರ |
ಲೆಡರು ಬಪ್ಪರೆ ಬಿಡುವ ಸುಭಟರೆ |
ಒಡನೆ ಮನದೊಳಗಿಪ್ಪ ಮಾತನು | ನುಡಿವುದೆಮಗೆ || ೭ ||

ಅಂಧಕಾಸುರ ತಲೆಯ ತೂಗುತ |
ಲೆಂದ ಭಲರೇ ನಿಮ್ಮ ಸಾಹಸ |
ದಂದವನು ನಾನರಿವೆ ಯೋಚಿಪು | ದಿಂದು ನಾವು || ೮ ||

ನಾವು ಪೂರ್ವಾಮರರು ನಮ್ಮನು |
ದೇವತೆಗಳಡಿಗಡಿಗೆ ವಂಚಿಸಿ |
ತಾವು ನಾಕದಿ ಸೊಕ್ಕಿ ಮೆರೆವರು | ಈವಿಯಿಂದ || ೯ ||

ಶರಧಿಮಥನದಿ ಗೈದ ಕೈತವ |
ಮರೆಯಲಹುದೇ ಮೊನ್ನೆಯಕಟಾ |
ಹರಿಯು ಸ್ವರ್ಭಾನುವಿನ ಶಿರವನು | ತರಿದನಲ್ಲ || ೧೦ || 31 ||

ಮಾರವಿ - ಏಕ
ಅದಕಾ ಇಲ್ವಲ ವೀರಾಟೋಪದೊ |
ಳೆದೆಯುಬ್ಬಿಸುತೆಂದ ||
ಕದನ ಕಲಿಗಳಾವಿರುತಿರೆ ಮನದಲಿ |
ಬದಲೆಣಿಕೆಯದೇಕೆ || ೧ ||

ಪೊರಮಡಲಿದು ಸುಸಮಯವಾ ನಾಕಕೆ |
ಸುರರನು ಗೆಲ್ವುದಕೆ ||
ನೆರಹಿಸು ಸೈನ್ಯವನೀ ಕ್ಷಣವೆನ್ನುತ |
ಮೊರೆದನು ವಾತಾಪಿ || ೨ || 33 ||

ಭಾಮಿನಿ
ಭಾಪುರೇ ಮೆಚ್ಚಿದೆನು ಉಗ್ರ ಪ್ರ |
ತಾಪಿಗಳು ನೀವಹುದು ನಿಶ್ಚಯ |
ವಾ ಪುರಂದರ ಮುಖ್ಯರನು ಗೆಲ್ವುದಕೆ ಶೀಘ್ರದಲಿ ||
ಪೋಪುದೇ ಮನದೆಣಿಕೆಯೆನ್ನುತ |
ತಾ ಪಿರಿದು ಸಂಭ್ರಮಿಸೆ ತಿಳಿಯುತ |
ಲೀ ಪರಿಯನಾಚಾರ್ಯ ಶುಕ್ರನು ವಹಿಲದಿಂ ಬಂದ || ೧ || 34 ||

ಶುಕ್ರಾಚಾರ್ಯನ ಆಗಮನ

ಕೇದಾರಗೌಳ - ಅಷ್ಟ
ವತ್ಸ ಅಂಧಕ ಸೈನ್ಯ ಮೊತ್ತವನೊಡಗೂಡು |
ತೆತ್ತ ನೀ ಪೊರಟಿರುವೆ ||
ಉತ್ಸಾಹವುಕ್ಕುತಲಿಹುದು ಹದನವೆನ್ನ |
ಚಿತ್ತಕೆ ಬಾರದಾಯ್ತು || ೧ ||

ಮಣಿದೆಂದನಂಧಕ ಗುರುವರ ಮನ್ನಿಪು |
ದನುಮತಿ ಯಾಚಿಸದೆ ||
ಅನಿಮಿಷ ಪುರಕೆ ಧಾಳಿಯಗೈವ ಸನ್ನಾಹ |
ದೆಣಿಕೆಗೈಯುತಲಿರ್ದನು || ೨ ||

ಬಂದುದು ಲೇಸಾಯ್ತು ತವ ಪೂರ್ಣಾಶೀರ್ವಾದ |
ವಿಂದೆಮ್ಮ ಮೇಲಿರ್ದಡೆ ||
ವೃಂದಾರಕರ ತೊಲಗಿಸಿ ನಾಕವೆಮ್ಮದು |
ಎಂದು ಶಾಸನಗೈವೆವು || ೩ ||

ಒಂದು ಮಾತನು ಕೇಳು ಅಂಧಕ ರಾಕ್ಷಸ |
ವೃಂದದ ಶ್ರೇಯವನ್ನು ||
ಎಂದೆಂದು ಬಯಸುವೆನಾದಡೆ ನಾಕಕೆ |
ಯಿಂದು ಪೊರಡಬಾರದು || ೪ ||

ಹಕ್ಕಿಗೆ ರೆಕ್ಕೆಯು ಬಲಿಯದೆ ಹಾರಲ್ಕೆ |
ದಿಕ್ಕುಗೆಟ್ಟುರುಳುವುದು ||
ತಕ್ಕ ಸಾಮರ್ಥ್ಯವ ಗಳಿಸಿ ಬಳಿಕ ಧಾಳಿ |
ಯಿಕ್ಕುವುದುಚಿತ ಕೇಳು || ೫ ||

ಏನೆಂಬಿರಾಚಾರ್ಯ ವಿಪ್ರಚಿತ್ತಿಯ ವೀರ |
ಸೂನುಗಳೀ ಕಾಲದಿ ||
ಊನ ಬಲರೆ ನಿಮ್ಮ ಕೃಪೆಯೊಳು ಗೆಲ್ವೆವು |
ಆ ನಾಕವನು ಕ್ಷಣದಿ || ೬ || 40 ||

ವಾರ್ಧಕ

ಆತುರವು ತರವಲ್ಲ ಅಂಧಕನೆ ಕೇಳಯ್ಯ |
ಯಾತುಧಾನರ ವ್ರಾತವನ್ನು ಸಂಘಟಿಸೆ ನಾ |
ವೋತು ಯತ್ನವಗೈದು ಬಲವನಾರ್ಜಿಸಬೇಹುದುಚಿತವೆಲ್ಲಾ ಪರಿಯೊಳು ||
ನೀತಿಬಾಹಿರ ರೀತಿಯುಳಿದಸುರ ಸಂಸ್ಕೃತಿಯ |
ಖ್ಯಾತಿಯನ್ನುರೆ ಬೆಳೆಸಬೇಕೆನುತ ಬಯಸುವೆಂ |
ನೀ ತಪದೊಳಾ ಪದ್ಮಜಾತನನ್ನೊಲಿಸುವುದು ಮೊದಲಿದನು ಮರೆಯದೆಸಗು || ೧ || 41 ||

ಕಾಂಭೋದಿ - ಝಂಪೆ

ಸಮುಚಿತವು ನಿಮ್ಮ ನುಡಿಗೊಪ್ಪಿದೆನು ಆಚಾರ್ಯ |
ಅಮಿತ ಬಲವನು ಪಡೆವ ಬಗೆಗೆ ||
ಕಮಲಸಂಭವನ ತಪದಲಿ ಮೆಚ್ಚಿಸುವೆನೆಂದು |
ನಮಿಸಿ ಬೀಳ್ಕೊಟ್ಟ ಗುರುವರನ || ೧ ||

ಅಂಧಕನ ತಪೋಗಮನ

ಪುರದ ಅಧಿಕಾರವನು ಇಲ್ವಲಂಗೊಪ್ಪಿಸುತ |
ಬರುವೆ ಶೀಘ್ರದೊಳೆನುತ ಪೊರಟು ||
ತೆರಳುತತಿ ಘೋರ ಕಾಂತಾರವನು ಸಾರ್ದು ಘನ |
ತರದ ತಪದೊಳು ನಿಂದ ದನುಜ || ೨ || 43 ||

ವಾತಾಪಿ ಇಲ್ವಲರ ಆಟಾಟೋಪ

ಸೌರಾಷ್ಟ್ರ - ತ್ರಿವುಡೆ
ಇತ್ತ ಇಲ್ವಲನಧಿಕ ಸಂಭ್ರಮ |
ವೆತ್ತು ವಾತಾಪಿಯ ಸಹಿತ ಬಲು |
ಮತ್ತತೆಯೊಳಧಿಕಾರ ಪೀಠವ | ಹತ್ತಿ ಕುಳಿತ || ೧ ||

ಅನುಜ ಕೇಳೈ ಅಗ್ರಜನು ತಪ |
ಕೆನುತ ತೆರಳಿದನವನು ಪಿಂದಿರು |
ವನಕ ಮೆರೆವುದು ಸಡಗರದಿ ಮನ | ದಣಿಕೆಯಂತೆ || ೨ ||

ಲಾಲಿಸಣ್ಣನೆ ನಮ್ಮ ರಾಕ್ಷಸ |
ಜಾಲವನು ಸಂಘಟಿಸುತಾ ಪ್ರತಿ |
ಕೂಲವರ್ಗವ ಮರ್ದಿಸಲ್ಕಿದು | ಕಾಲವೈಸೆ || ೩ ||

ಖರೆಯು ನೀನಾಡಿದ ನುಡಿಯು ಭೂ |
ಸುರರೆನುತ ಬಿಂಕದೊಳು ಧರೆಯೊಳು |
ಕರೆಸಿಕೊಂಬುವ ಪಾರ್ವರಾಟವ | ಮುರಿಯಲಹುದು || ೪ ||

ಯಾಗ ಯಜ್ಞವನೆಸಗೆ ಹವಿಯನು |
ಭೋಗಿಸುತ ನಾಕದಲಿ ದಿವಿಜರು |
ಬೀಗುವರು ಬಲವೆರಸಿ ನೋಡೆ ಸ | ರಾಗದಿಂದ || ೫ ||

ಅದಕೆ ವಿಪ್ರರ ಸದೆದು ಯಜ್ಞದ |
ಹದನವೆಂಬುದೆ ಧರೆಯೊಳಿಲ್ಲದ |
ವಿಧದೊಳೆಸಗಲು ಬೇಕು ಮುಂದಕೆ | ವಿದಿತವಾಗಿ || ೬ || 49 ||

ಕೇದಾರಗೌಳ - ಅಷ್ಟ
ಹೊಳೆವುದು ಯೋಚನೆಯೊಂದು ವಿನೋದವ |
ನಳವಡಿಸುತ ದ್ವಿಜರ ||
ಅಳಿಸುವ ಬಗೆಗೆ ಮಾಯಾ ಕಲಾಪದಿ ನೀನು |
ತಳೆವುದು ಅಜರೂಪವ || ೧ ||

ಅಜವ ತರಿದು ಪಾಕಗೈದು ಭೋಜನಕೆಂದು |
ದ್ವಿಜರನಾಮಂತ್ರಿಸುತ ||
ಭುಜಿಸೆ ಮಾಂಸವ ಮತ್ತೆ ಕರೆಯಲುದರ ಸೀಳ್ದು |
ನಿಜ ರೂಪದೊಳು ಬಹುದು || ೨ ||

ಗಹಗಹಿಸುತಲೆಂದನದಕೆ ವಾತಾಪಿಯು |
ಅಹುದಹುದಗ್ರಜನೆ ||
ಕುಹಕ ಚೇಷ್ಟೆಯೊಳು ಪಾರ್ವರನು ಭುಜಿಸುವುದೆ |
ವಿಹಿತವು ನಮಗೀಗಳು || ೩ || 52 ||

ಭಾಮಿನಿ
ಅಂತರಂಗದಿ ಖಳರು ತಮ್ಮೊಳ |
ಗಿಂತು ಯೋಚಿಸಿ ಬಳಿಕ ವಿಪ್ರರ |
ನಂತು ಕೈತವದಿಂದ ಕರೆಯುತ ಮಾಂಸ ಭೋಜನಕೆ ||
ಸಂತಸದೊಳಜಮಾಂಸವುಂಡಾ |
ನಂತರದಿ ವಾತಾಪಿ ಬಾಯೆಂ |
ದಿಂತು ಇಲ್ವಲ ಕರೆಯಲುದರವನೊಡೆದು ಬರುತಿರ್ದ || ೧ || 53 ||

* * * * * * * * *

ಅಗಸ್ತ್ಯನ ಪ್ರವೇಶ

ಸಾಂಗತ್ಯ - ರೂಪಕ
ಘನ ತಪೋಧನ ಮೈತ್ರಾವರುಣಿಯು ತಾನೊಂದು |
ದಿನದೊಳು ಗಿರಿಯ ಕಂದರದ ||
ವನದಿ ಮುನ್ನಡೆದಿರೆ ಚೋದ್ಯವೊಂದನು ಕಂಡು |
ಮನದಿ ನಿಬ್ಬೆರಗಾಗಿ ನಿಂದ || ೧ ||

ತರು ಶಾಖೆಯಿಂ ತಲೆಕೆಳಗಾಗಿ ಜೋತಾಡು |
ತಿರುವ ವಿಚಿತ್ರ ವ್ಯಕ್ತಿಗಳ ||
ಪರಿಯ ಕಾಣುತ ಕೇಳ್ದನವರೊಳು ನೀವಾರು |
ಮರದೊಳಿಂತೇಕೆ ತೂಗುವಿರಿ || ೨ ||

ಅದಕೆಂದರೆಲೆ ವತ್ಸ ನಿನ್ನ ಪೂರ್ವಜರಾವು |
ಒದಗಿದೆ ಸಂತಾನಚ್ಛೇದ ||
ಉದಿಸಲು ನಿನಗೋರ್ವ ಸೂನು ಮುಕ್ತಿಯ ಪುಣ್ಯ |
ಪದವೆಮಗಪ್ಪುದು ದಿಟವು || ೩ ||

ಆ ವಚನವ ಕೇಳಿ ಮುನಿವರ ಕರ್ತವ್ಯ |
ಭಾವದೊಳೆಂದ ಮತ್ತವರ್ಗೆ ||
ತಾವೆಚ್ಚರಿಸಿದುದು ಲೇಸಾಯ್ತು ಶಾಂತಿಯ |
ನೀವೆನು ನಿಮಗೆ ಶೀಘ್ರದಲಿ || ೪ ||

ಎಂದು ಸಂತವಿಸುತಲ್ಲಿಂದ ಪೊರಟು ತನ್ನೊ |
ಳೆಂದನು ವೈವಾಹಕೆನಗೆ ||
ಪೊಂದುವ ಕನ್ನಿಕೆ ಯಾರಿಹಳೆಲ್ಲಿಹ |
ಳೆಂದು ತನ್ನೊಳಗೆ ಚಿಂತಿಸಿದ || ೫ || 58 ||

ಭಾಮಿನಿ
ಅರಿತೆನರಿತೆನು ವರ ವಿದರ್ಭದ |
ದೊರೆಯು ವಿಭ್ರಾಜಿತನ ಮುದ್ದಿನ |
ತರಳೆ ಲೋಪಾಮುದ್ರೆ ವಿಧಿ ಸಂಕೇತದೊಳು ಎನಗೆ ||
ದೊರಕಲಾ ಪುರುಷಾರ್ಥ ಸಾಧನ |
ಕಿರದೆ ಯತ್ನಿಪೆನೆನುತ ಜವದಲಿ |
ಪೊರಟ ಕನ್ಯಾಕಾಂಕ್ಷೆಯಿಂದ ವಿದರ್ಭ ಪುರದೆಡೆಗೆ || ೧ || 59 ||

ವಿಭ್ರಾಜಿತನ ಪ್ರವೇಶ

ಕೇದಾರಗೌಳ - ಝಂಪೆ
ಬಂದ ಮುನಿಪನ ಮನ್ನಿಸಿ | ಬೆಸನವೇ |
ನೆಂದೆನಲು ಪೇಳ್ದ ತಪಸಿ ||
ಬಂದಿಹೆನು ತವಜಾತೆಯ | ಕೈ ಪಿಡಿಯ |
ಲೆಂದು ಲೋಪಾಮುದ್ರೆಯ || ೧ || 60 ||

ಲೋಪಾಮುದ್ರೆಯ ಆಗಮನ

ಕೇದಾರಗೌಳ - ಅಷ್ಟ
ಮುನಿಪನ ಮಾತಿಗುತ್ತರವನಾಡದೆ ಭೂಪ |
ಘನ ಚಿಂತೆವೆತ್ತಿರಲು ||
ತನುಜೆ ಲೋಪಾಮುದ್ರೆಯದನರಿತಾಗ ಸಾಂ |
ತ್ವನ ಗೈಯಲೈತಂದಳು || ೧ || 61 ||

ಕೇದಾರಗೌಳ - ಝಂಪೆ
ಪಿತನೆ ಚಿಂತಿಪುದೇತಕೆ | ಮುನಿವರನೆ |
ಪತಿಯಪ್ಪುದೆನ್ನ ಮನಕೆ ||
ಹಿತವೆಂದು ತೋರ್ಪುದಿಂದು | ಆದರ್ಶ |
ಸತಿಯಪ್ಪೆ ಹರಸು ಒಲಿದು || ೧ || 62 ||

ಕೇದಾರಗೌಳ - ಅಷ್ಟ
ಮಗಳೆನ್ನ ಪ್ರೇಮದ ಮುಗುಳೆ ತಾಪಸನೊಳು |
ಒಗೆತನವೆಂತಹುದು ||
ಮಿಗೆ ಸೊಗದಿಂದರಮನೆಯೊಳು ಬಾಳ್ದವ |
ಳಿಗೆ ತಗದೀ ಬಗೆಯು || ೧ || 63 ||

ಕೇದಾರಗೌಳ - ಝಂಪೆ
ಎನಿತೊ ಜನ್ಮಗಳ ಸುಕೃತ | ವರ ತಪೋ |
ಧನನೊಡನೆ ಮಮಜೀವಿತ ||
ಅನುಮಾನ ಬೇಡವಿದಕೆ | ನೋಡಲ್ಕೆ |
ಮನವೆ ಕಾರಣವು ಸುಖಕೆ || ೧ || 64 ||

ಲೋಪಾಮುದ್ರೆಯ ವಿವಾಹ

ಸೌರಾಷ್ಟ್ರ - ತ್ರಿವುಡೆ
ಅರಸ ಚಿಂತೆಯನುಳಿದು ಮುನಿಪಗೆ |
ತರಳೆಯನು ಶಾಸ್ತ್ರೋಕ್ತ ವಿಧಿಯೊಳು |
ಪರಿಣಯವ ಗೈಸುತ್ತಲೀಯಲು | ಹರುಷದಿಂದ || ೧ ||

ಮತ್ತೆ ವಧುವಿನ ಸಹಿತಲಾ ಮುನಿ |
ಸತ್ತಮನು ಸಂತಸದೊಳಾಶ್ರಮ |
ದತ್ತ ಬಂದನು ನಡೆಸಿದನು ಗಾ | ರ್ಹಸ್ಥ್ಯವನ್ನು || ೨ ||

ಕಳೆಯೆ ಕತಿಪಯ ಕಾಲ ಸುಖದಿಂ |
ತಳೆದಳಾ ಮುನಿಸತಿಯು ಗರ್ಭವ |
ನಲಿಯೆ ನವಕಳೆ ಮುಖದಿ ಹದನವ | ತಿಳಿದ ಮುನಿಪ || ೩ || 67 ||

ಶಂಕರಾಭರಣ - ಏಕ
ನೀರೆ ಲೋಪಮುದ್ರೆ ನಿನ್ನ |
ಚಾರುವದನ ಕಳೆಯು ಶುಭವ |
ಸಾರುತಿಹುದು ಗರ್ಭಚಿಹ್ನೆ | ತೋರುತಿದೆಯಲಾ || ೧ || 68 ||

ಶ್ರೀರಾಗ - ರೂಪಕ
ಎರೆಯ ನಿನ್ನೊಳ್ಹೇಳಲು ಖರೆಯು ಸಂಕೋಚದೊ |
ಳೊರೆಯದೆ ಪೋದೆ ಮನ್ನಿಪುದು ||
ಅರಿಕೆ ಮತ್ತೊಂದಿಹುದನ್ಯಥಾ ಗ್ರಹಿಸದ |
ಕ್ಕರೆಯಿಂದ ನಡೆಸಿ ಕೊಡುವುದು || ೧ || 69 ||

ಶಂಕರಾಭರಣ - ಏಕ
ಕುಲದ ಕುಡಿಯು ನಿನ್ನುದರದಿ |
ಬಳೆಯುತಿಹುದನರಿತು ಮುದದಿ |
ಪುಳಕಗೊಂಡೆ ಮನದ ವಾಂಛೆ | ತಿಳುಹಬೇಹುದು || ೧ || 70 ||

ಶ್ರೀರಾಗ - ರೂಪಕ
ವರ ದಿವ್ಯಾಂಬರ ರತ್ನಾಭರಣ ಸರ್ವಾಲಂ |
ಕರಣಂಗಳನ್ನೆನ್ನ ಮನವು ||
ನೆರೆ ಬಯಸುತ್ತಿದೆ ಹಂಸತೂಲಿಕೆಯೊಂದು |
ಪರಿಯಂಕದೊಳು ಪವಡಿಸಲು || ೧ || 71 ||

ಶಂಕರಾಭರಣ - ಏಕ
ಮರೆತ ರಾಜ ಭೋಗಸ್ಮರಣೆ |
ಮರುಕಳಿಸಿತೆ ಸಾಜವಹುದು |
ಬರಿಯ ಕೈಯ ಯತಿಯೆಂಬುದ | ನರಿತುದಿಲ್ಲವೆ || ೧ || 72 ||

ಶ್ರೀರಾಗ - ರೂಪಕ
ರಮಣ ನೀನತುಲ ತಪೋಧನ ವಾಂಛಿತ |
ಕಮನೀಯ ವಸ್ತುವೆಲ್ಲವನು ||
ನಿಮಿಷದಿ ಸೃಜಿಸಲು ಬಲ್ಲೆ ಈಡೇರಿಸು |
ಮಮ ಮನದಾಸೆಯ ಜವದಿ || ೧ || 73 ||

ಶಂಕರಾಭರಣ - ಏಕ
ಸೃಷ್ಟಿಗೈಯೆ ತಪಸ್ಸಂಚಿತವು |
ನಷ್ಟವಪ್ಪುದದಕೆ ಬೇರೆ |
ಬಟ್ಟೆಯಿಹುದು ನಿನ್ನ ಮನಕೆ | ತುಷ್ಟಿಯ ಗೈವೆ || ೧ || 74 ||

ಭಾಮಿನಿ
ನೀನು ಬಯಸಿದ ದ್ರವ್ಯಗಳನೆಂ |
ತಾನು ಗಳಿಸಿಯೆ ಬಹೆನು ಶೀಘ್ರದಿ |
ನೀನು ನಿಶ್ಚಿಂತೆಯೊಳಿಹುದುಯೆಂದೆನುತ ಕುಂಭಜನು ||
ಮಾನಿನಿಯ ಬೀಳ್ಕೊಂಡು ತಾ ದ್ರ |
ವ್ಯಾನುಕೂಲತೆಗೆಳಸಿ ನೃಪ ಶ್ರುತ |
ವರ್ಾಣ ಮೇಣ್ ಬ್ರಧ್ನಶ್ವ ಭೂಪರ ಪುರಕೆ ತೆರಳಿದನು || ೧ || 75 ||

ಆರ್ಯಸವಾಯಿ - ಏಕ
ತಿಳಿಯುತಲಾ ದೇಶಗಳಾಯವ್ಯಯ |
ಗಳ ಮಿಕ್ಕಿರದಿರೆ ದ್ರವ್ಯವದು ||
ಅಳತೆಯಿರದ ಧನ ದನುಜಾಧಿಪ ಇ |
ಲ್ವಲನಲ್ಲಿಹುದೆಂಬುದನರಿತು || ೧ ||

ಪೊರಟನು ಇಲ್ವಲನೆಡೆಗೆ ಮುನಿಯ ಬರ |
ವರಿತು ನಿಜಾನುಜ ಸಹಿತಾಗ ||
ಹರುಷದಿ ಮನ್ನಣೆಯಾಟವನೆಸಗಿದ |
ಕರವ ಮುಗಿದು ಖಳ ವಿನಯದೊಳು || ೨ || 77 ||

ಸಾರಂಗ - ಅಷ್ಟ
ಪಾದ ದರ್ಶನದಿ ನಾನು | ದಿಟದಿ ಧನ್ಯ |
ನಾದೆನು ನೀ ಕೇಳಿನ್ನು ||
ಮೋದದೊಳಿಲ್ಲಿಗೈತಂದ ಕಾರಣವ ನೀ |
ನಾದೇಶಿಸಲು ಶಿರಸಾ ಧರಿಸುವೆನಯ್ಯ || ೧ || 78 ||

ಮಧುಮಾಧವಿ - ಅಷ್ಟ
ಕೇಳಯ್ಯ ದಾನವಾಗ್ರಣಿ ಮಮ ಗೃಹಿಣಿ |
ಮೇಲಾದ ಭೋಗ ಸಾಧನಗಳ ರಮಣಿ ||
ಲೀಲೆಯೊಳಿಚ್ಛಿಸೆ ನಿರುಪಾಯನಾಗಿ |
ಕೇಳಿ ಪಡೆವೆನೆಂದು ಬಂದೆನು ಸಾಗಿ || ೧ || 79 ||

ಸಾರಂಗ - ಅಷ್ಟ
ಮುನಿವರ ತೋಷವಾಂತೆ | ಮರೆವುದಿನ್ನು |
ಮನದೊಳಗಿರ್ದ ಚಿಂತೆ ||
ಎನಿತನಿಚ್ಛಿಪೆ ಧನ ಕನಕಂಗಳೆಲ್ಲವ |
ನನುಗೊಳಿಸುವೆ ಭೋಜನ ಮೊದಲಾಗಲಿ || ೧ || 80 ||

ಭಾಮಿನಿ
ಎಂದು ಸ್ನಾನಕೆ ಮುನಿಯ ಕಳಹುತ |
ಲಂದು ಇಲ್ವಲನಜದ ರೂಪವ |
ವೊಂದಿದನುಜನ ಮಾಂಸ ಪಾಕವಗೈಸಿ ವಹಿಲದಲಿ ||
ಮಿಂದು ಬಂದಾ ಮುನಿಪನಿಗೆ ನಲ |
ವಿಂದ ಬಡಿಸಿದ ಪಕ್ವ ಮಾಂಸವ |
ನಂದು ಭುಜಿಸಿದನೆಲ್ಲವನು ನಗುನಗುತ ಘಟಜಾತ || ೧ || 81 ||

ಕಾಂಭೋದಿ - ಝಂಪೆ
ಆರೋಗಣೆಯು ಮುಗಿಯೆ ಅಟ್ಟಹಾಸದಿ ಖಳನು |
ಬಾರೋ ವಾತಾಪಿ ಬಾಯೆನುತ ||
ಏರು ದನಿಯಲಿ ಕರೆಯಲೆಂದಿನಂದದಿ ತಮ್ಮ |
ಬಾರದಿರೆ ಕಳವಳವನಾಂತ || ೧ ||

ವಾತಾಪಿ ಜೀರ್ಣೋಭವ

ನಗುತ ಮೈತ್ರಾವರುಣಿಯುದರವನು ಸವರುತ್ತ |
ಮಿಗೆ ಥರ್ರನೆಂದು ತಾ ತೇಗಿ ||
ಬಗೆದೆಯಾ ಕೈತವವ ಬಗಿದು ಬರಲಾರ ನಾ |
ನಗಿದು ಜೀರ್ಣಿಸಿದೆ ನಿನ್ನವನ || ೨ ||

ಭಂಡಮುನಿಯನುಜನನ್ನುಂಡು ಜೀರ್ಣಿಸಿದೆಯಾ |
ರುಂಡವನು ಛೇದಿಸುವೆನೆನುತ ||
ಕೊಂಡು ಕರವಾಳವನು ಮುಂದಕಡಿಯಿಡಲು ಪ್ರ |
ಚಂಡ ಕ್ರೋಧವನಾಂತ ಮುನಿಯು || ೩ ||

ಊಟದಾಟವ ಗೈದ ಮಾಟಗಾರನೆ ನಿನ್ನ |
ಹೂಟ ನಿನಗೇ ನಾಟಿತಿದಕೋ ||
ಆಟವಡಗಿಪೆ ದುಷ್ಟಯೆಂದು ಕಣ್ಣಿಡಲಾ ನಿ |
ಶಾಟ ಬಿಳ್ದನು ಸುಟ್ಟು ಕ್ಷಣದಿ || ೪ ||

ನಿಲ್ಲದಲ್ಲಿಂ ಬಳಿಕಗಸ್ತ್ಯ ನಡೆದನು ದ್ರವ್ಯ |
ವೆಲ್ಲಿ ದೊರೆಕೊಳ್ವುದೆಂದೆನುತ ||
ಬಲ್ಲಿದನು ಇಕ್ಷ್ವಾಕು ಕುಲಜ ತ್ರಸದಸ್ಯು ಭೂ |
ವಲ್ಲಭನ ಬಳಿಗೆ ತಾ ಪೋದ || ೫ || 86 ||

ನಾದನಾಮಕ್ರಿಯೆ - ಅಷ್ಟ
ವಾತಾಪಿ ಇಲ್ವಲರಳಿವನ್ನು | ಕೇಳ್ದು |
ಘಾತ ಗೊಂಡನು ಶುಕ್ರಾಚಾರ್ಯನು ||
ಪಾತಕ ಗೈದರು ವ್ಯರ್ಥದಿ | ಅಸುರ |
ವ್ರಾತದ ಮೇಲ್ಮೈಗಾವುದೊ ಹಾದಿ || ೧ ||

ಅಂಧಕ ತಾ ತಪಕೈದಿಹ | ಬಹ |
ನೆಂದಿಗೊ ದಾನವ ಸಂದೋಹ ||
ಇಂದಿಗನಾಯಕವಾಯ್ತಲ್ಲ | ಇನ್ನು |
ಮುಂದಿನ ಪರಿಯ ಶಂಭುವೆ ಬಲ್ಲ || ೨ || 88 ||

ಸೌರಾಷ್ಟ್ರ - ತ್ರಿವುಡೆ
ಎನುತ ದನುಜರಿಗೊರೆದು ಧೈರ್ಯವ |
ವಿನುತ ನೀತಿಯ ತಿಳುಹಿ ಮಂತ್ರಿಗ |
ಳನು ಕರೆದು ತಾನೊರೆದನೊದಗಿದ | ಹೊಣೆಯ ಹದನ || ೧ ||

ಅತ್ತಲಂಧಕ ಘನ ತಪಕೆ ಮನ |
ವಿತ್ತು ಭಜಿಸುತಲಿರ್ದನಜನನು |
ಭಕ್ತಿ ಭಾವದಿ ಹಸಿವು ತೃಷೆಯುಳಿ | ಯುತ್ತ ಸತತ || ೨ || 90 ||

ಪಹಡಿ - ಅಷ್ಟ
ಸರಸಿಜಭವ ಜಯ ಜಯತು | ವಾಣೀ |
ವರ ಕೃಪಾಕರ ಜಯ ಜಯತು | ದೇವ |
ಪರಮೇಷ್ಠಿ ನೀ ದಯೆಯಾಂತು | ಬಂದು |
ಪೊರೆವುದೆನಗೆ ವರವಿತ್ತು ||
ಭರದಿ ಮೈದೋರುತೆನ್ನಯ ಮನದರಿಕೆಯ |
ಕರುಣಿಸಿ ಪ್ರೇಮದಿ ಪೊರೆವುದು ತರಳನ || ೧ || 91 ||

ಬ್ರಹ್ಮ ಪ್ರತ್ಯಕ್ಷ

ಭಾಮಿನಿ
ಅಂಧಕನ ಕಡು ಭಕ್ತಿಗೊಲಿದರ |
ವಿಂದಭವ ಮೈದೋರಿದನು ನಲ |
ವಿಂದಲಾತನ ಪದಕೆರಗಲಸುರನನು ಪಿಡಿದೆತ್ತಿ ||
ಬಂದೆ ನಿನ್ನಯ ತಪಕೊಲಿದು ನೀ |
ನಿಂದು ಬೇಡುವುದೇನು ನೀಡುವೆ |
ನೆಂದು ದ್ರುಹಿಣನು ನುಡಿಯೆ ತೋಷದೊಳೆಂದನಂಧಕನು || ೧ || 92 ||

ಸುರುಟಿ - ಏಕ
ಬಂದೆಯ ಓ ಸ್ವಾಮಿ | ಕರುಣಾ |
ಸಿಂಧು ಭಕ್ತ ಪ್ರೇಮಿ ||
ಇಂದಿಗೆ ಧನ್ಯತೆ ಪೊಂದಿದೆ ಕರುಣಿಸು |
ಮುಂದಿನ ಶ್ರೇಯಕ್ಕೊದಗುವ ವರಗಳ || ೧ ||

ಮೂರು ಲೋಕದೊಳಗೆ | ಇರುತಿ |
ಪಾರಿಂದಲುಯೆನಗೆ ||
ಬಾರದಿರಲಿ ಮರಣವು ಆಯುಧವು ವಿ |
ದಾರಿಸದಿರಲಿ ಶರೀರವನೆಂದಿಗು || ೨ ||

ಹರಸುತ ವಿಧಿಯೆಂದ | ಕೊಟ್ಟೆನು |
ವರವನು ಮುದದಿಂದ ||
ಚಿರ ಕೀರ್ತಿಯ ಪಡೆ ನಡೆಯೆನ್ನಲು ಸಡ |
ಗರದಿ ನಮಿಸಿ ನಿಜ ಪುರದೆಡೆಗೈದಿದ || ೩ || 95 ||

ಸಾಂಗತ್ಯ - ರೂಪಕ
ಪುರಕೈತರಲು ಸಚಿವರು ಇದಿರ್ಗೊಂಡರು |
ಗುರು ಶುಕ್ರಾಚಾರ್ಯರ ಸಹಿತ ||
ವರ ಬಲಕಾಗಿ ಹಿಗ್ಗಿದರೆಲ್ಲರು ಬಳಿ |
ಕರಿತನನುಜರಳಿದುದನು || ೧ ||

ಅಕಟಯಿಂತಾದುದೆ ವಿಕಟವಿಧಿಯೆ ಎನ್ನ |
ನಿಕಟ ಸೋದರರಳಿವಾಯ್ತು ||
ಸಕಲ ಸೌಭಾಗ್ಯಾತಿಶಯವ ನಾನಿನ್ನಾರ್ಗೆ |
ಪ್ರಕಟಿಪೆನೆಂದು ಶೋಕಿಸಿದ || ೨ ||

ಗುರು ಶುಕ್ರಾಚಾರ್ಯ ಸಾಂತ್ವನಗೈಯುತೆಂದನು |
ಮರುಗಿದರೇನಹುದಿನ್ನು ||
ತೊರೆ ಶೋಕವನು ದನುಜರ ಶ್ರೇಯೋಪಥವನ್ನು |
ಕುರಿತು ಯೋಚಿಪುದೆ ವಿಹಿತವು || ೩ ||

ದಿತಿಜರ ಕೀರ್ತಿ ವೈಭವವ ಮೆರೆಸಲೀಗ |
ಸ್ಥಿತಿಯನುಕೂಲವಾಗಿಹುದು ||
ಅತುಳ ಸೇನೆಯನೊಡಗೂಡಿ ದಿಗ್ವಿಜಯಕೆ |
ಅತಿ ಶೀಘ್ರದಿಂ ಪೊರಡುವುದು || ೪ || 99 ||

ಅಂಧಕನ ದಿಗ್ವಿಜಯ

ಸೌರಾಷ್ಟ್ರ - ತ್ರಿವುಡೆ
ಎನೆ ಹಸಾದವುಯೆನುತ ಅಂಧಕ |
ಮನದೊಳುತ್ಸಾಹಿಸುತ ದನುಜರ |
ಬಣವ ನೆರಹುತ ದಿಗ್ವಿಜಯಕೆಂ | ದೆನುತ ಪೊರಟ || ೧ ||

(ಕಾಲಕೇತುವಿನ ಒಡ್ಡೋಲಗ)

ಅತ್ತಲಾ ಕಾಲೇಯ ಪುರದಲಿ |
ದೈತ್ಯನಾಯಕ ಕಾಲಕೇತುವು |
ಇತ್ತನೊಡ್ಡೋಲಗವನನುಜರ | ಮೊತ್ತ ಸಹಿತ || ೨ ||

ಕಾಲಮುಖ ಕಲಿ ಕಾಲನೇಮಿಯು |
ಕಾಲ ಕೌತುಕ ಮುಖ್ಯ ಸೋದರ |
ಜಾಲ ಸಹಿತಾಡಂಬರದಿ ಖಳ | ಮೇಳದೊಡನೆ || ೩ ||

ಮೆರೆದಿರಲು ಕರೆದೆಂದ ನಿಜ ಸೋ |
ದರರ ಲಾಲಿಪುದತುಳ ಸಾಹಸ |
ವೆರಸಿ ಬಾಳ್ವುದು ಪುರುಷ ಸಿಂಹರ | ತೆರದಿ ಜಗದಿ || ೪ ||

ದಿವಿಜರೆಮಗಾಜನ್ಮ ಶತ್ರುಗ |
ಳವರ ತೇಜವ ತವಿಸೆ ಜಗದಲಿ |
ಹವನ ಹೋಮಾದಿಗಳಗೈವರ | ಸವರಲಹುದು || ೫ ||

ಕಾಲಮುಖ ತಾನೆಂದ ಮತ್ತಾ |
ಮೂಳ ಮುನಿ ಕುಂಭಜನ ದೆಸೆಯಿಂ |
ಕಾಲಗತಿಯಾಯ್ತೆಮ್ಮವರಿಗಿದ | ಪೇಳಲೇನು || ೬ ||

ಕಾಲನೇಮಿಯು ಹಲ್ಲ ಕಡಿಯುತ |
ಪೇಳಿದನು ಕೊಡಕುವರ ಮುಖ್ಯರ |
ಪೀಳಿಗೆಯನೊರಸುವುದೆ ನಮ್ಮಯ | ಪಾಲಿಗುಚಿತ || ೭ ||

ಪಣವ ತೊಟ್ಟನು ಕಾಲಕೌತುಕ |
ಬಣಗು ಮುನಿಗಳ ದ್ವಿಜರ ಬೆಂಬಲ |
ಕೆನುತ ಸುರರ್ಕೈತರಲು ಸದೆಯುವೆ | ರಣದೊಳೆನುತ || ೮ || 107 ||

ಭಾಮಿನಿ
ಅನುಜರೆಂದುದ ಕೇಳ್ದು ದಿತಿಜೇ |
ಶನು ಭಳಿರೆ ಪೊರಡುವುದು ಜವದಿಂ |
ಮುನಿಜನಂಗಳ ಯಜನ ಯಾಗಾದಿಗಳ ಭಂಗಿಸಲು ||
ಎನಲು ಸಂಭ್ರಮಿಸುತ್ತಲಾಕ್ಷಣ |
ದನುಜರುಬ್ಬಟೆಯಿಂದ ಪೊರಟರು |
ಬಿನುಗುತನದಲಿ ಯಾಜ್ಞಿಕರ ನಿರ್ಮೂಲಿಸುವ ಬಗೆಗೆ || ೧ || 108 ||

ಯಜ್ಞ ಭಂಗ

ಆರ್ಯಸವಾಯಿ - ಏಕ
ಹಲಗಾಲದೆ ಮಳೆ ಸುರಿಯದೆ ಬೇಗೆಯೊ |
ಳಿಳೆ ನೊಂದಿರಲೊಂದೆಡೆಯಲ್ಲಿ ||
ಮಳೆಗೋಸುಗ ಮಂಗಳಕರ ಯಜ್ಞವ |
ಬಲು ಭಕ್ತಿಯೊಳೆಸಗುತ್ತಿರಲು || ೧ ||

ಬಂದರು ಯಜ್ಞ ವಿರೋಧಿ ದನುಜರಾ |
ಸಂದಣಿಯನ್ನೀಕ್ಷಿಸುತಾಗ ||
ಮಂದಮತಿಗಳೇತಕೆ ತುಪ್ಪವ ನೋ |
ರಂದದಿ ಬೆಂಕಿಗೆ ಸುರಿಯುವಿರಿ || ೨ || 110 ||

ಪೀಲು - ಅಷ್ಟ
ಅದಕೆ ತಾವೆಂದರು ಯಾಜಕರಾಗ |
ಇದು ಮೇಘದಿಂ ಮಳೆ ಬರಿಸುವ ಯಾಗ ||
ವಿಧಿ ವಿಹಿತದೊಳಾಜ್ಯ ಹವಿಯನರ್ಪಿಸಲು |
ಮುದವಾಂತು ದಿವಿಜರು ಮಳೆಯ ಕರೆವರು || ೧ || 111 ||

ಮಾರವಿ - ಏಕ
ಕೇಳುತದನು ಗಹಗಹಿಸುತ ದಿತಿಜರು |
ಕೋಲಾಹಲ ಗೈದು ||
ಪೇಳಿದರೆಲೆ ಮೂರ್ಖರೆ ಮಳೆಗಾಳಿಯ |
ನಾಳುವರೇ ಸುರರು || ೧ ||

ಕೊಡಿರೈ ತುಪ್ಪದ ಗಡಿಗೆಯನೀಕಡೆ |
ಮಡಗಿರಿ ತಿನಿಸುಗಳ ||
ಕಡು ಮೂಢರೆ ಸುಡು ಬೆಂಕಿಯೊಳಿಕ್ಕಲು |
ಕಡಿವೆವು ತಲೆಗಳನು || ೨ || 113 ||

ಪೀಲು - ಅಷ್ಟ
ಯಜನ ಯಾಗಗಳೆಲ್ಲ ಪೂರ್ವಪದ್ಧತಿಯು |
ಅಜಭವಾದಿಗಳನ್ನು ಭಜಿಪುದೆ ಕ್ರಮವು ||
ಸುಜನರ ಭಕ್ತಿ ಕಾರ್ಯಕೆ ವಿಘ್ನ ಸಲ್ಲ |
ಗಜರಲು ಯಜ್ಞವ ನಿಲ್ಲಿಪರಲ್ಲ || ೧ || 114 ||

ಮಾರವಿ - ಏಕ
ನಿಲ್ಲಿಸಿರೆಲವೋ ಖುಲ್ಲರೆ ಮಂತ್ರದ |
ಸೊಲ್ಲನ್ನಾಡದಿರಿ ||
ಸಲ್ಲದ ಯಜ್ಞವ ನಡೆಸುವಿರಾದಡೆ |
ಕೊಲ್ಲುವೆವೀಕ್ಷಣದಿ || ೧ ||

ಕರವಾಳವ ಹಿರಿಯುತ ದುರುಳರು ಮುಂ |
ಬರಿಯುತ ಕೆಲಬರನು ||
ತರಿದಿಕ್ಕಲು ಮಿಕ್ಕವರೆಲ್ಲರು ಹರ |
ಹರಯೆಂದೋಡಿದರು || ೨ || 116 ||

ಇಂದ್ರನ ಒಡ್ಡೋಲಗ

ಸೌರಾಷ್ಟ್ರ - ತ್ರಿವುಡೆ
ಆ ಸಮಯಕಾ ನಾಕಲೋಕದಿ |
ವಾಸವನು ತ್ರಿದಶರನು ಕೂಡುತ |
ಲಾ ಸುಧರ್ಮೆಯೊಳಿರ್ದ ಸುರ ಸಿಂ | ಹಾಸನದಲಿ || ೧ ||

ಅನಿಮಿಷರ ಕರೆದೆಂದ ಕೇಳ್ವಿರೆ |
ಬಣಗು ದೈತ್ಯರು ಕಾಲಕೇಯರು |
ಮುನಿಗಳಿಂಗತಿ ಬವಣೆಯೀವರು | ಕ್ಷಣ ಕ್ಷಣದಲಿ || ೨ ||

ಯಾಗ ನಡೆಯದೆ ಹೋಗೆ ಹವಿಸಿನ |
ಭೋಗ ದೊರಕದು ನಮಗೆ ಅದರಿಂ |
ಯಾಗ ರಕ್ಷಣೆಗಾಗಿ ಮರ್ತ್ಯಕೆ | ಸಾಗಬೇಕು || ೩ || 119 ||

ಭೈರವಿ - ಅಷ್ಟ
ಅಗ್ನಿಯು ಭುಗಿಲೆನ್ನುತ | ನುಡಿದನು ಯಜ್ಞ |
ವಿಘ್ನವನೆಸಗುವಂಥ ||
ಉಗ್ರರೂಪಿಗಳನ್ನು ನಿಗ್ರಹ ಗೈವೆ ರ |
ಣಾಗ್ರದೊಳತಿ ಜವದಿ || ೧ ||

ಮಾರುತ ಕನಲುತೆಂದ | ಕೇಳ್ವುದು ಮದ |
ವೇರಿದ ದನುಜ ವೃಂದ ||
ಮೀರಿ ವರ್ತಿಸೆ ಗಾರುಗೆಡಿಸುತ್ತಲಂತಕ |
ನೂರ ತೋರುವೆನವರ್ಗೆ || ೨ ||

ವರುಣನು ಬಳಿಕೆಂದನು | ಪೀಡಿಸುವಂಥ |
ದುರುಳರ ಗಡಣವನು ||
ಮುರಿದಿಕ್ಕಿ ಸುಜನರ್ಗೆ ಹರುಷವನೀವೆನು |
ಭರದೊಳೈದುವುದೆಂದನು || ೩ || 122 ||

ಭಾಮಿನಿ
ಸುರರ ನುಡಿಯನು ಕೇಳಿ ಮನದಲಿ |
ಹರುಷ ತಳೆಯುತ ದಿವಿಜಪತಿ ಬಳಿ |
ಕಿರದೆ ನಿಜಪರಿವಾರ ಸಹಿತಲೆ ಪೊರಟನಿಳೆಗಾಗಿ ||
ವರ ತಪೋವನವೊಂದರಲಿ ಕ್ರತು |
ಜರಗುತಿರಲಾ ಕಾಲಕೇಯರು |
ಪರಿಪರಿಯ ವಿಘ್ನಗಳನೆಂದಿನ ತೆರದೊಳೀಯುತಿರೆ || ೧ || 123 ||

ಸುರಾಸುರ ಸಂಘರ್ಷ

ಕಂದ
ಮೊರೆಯಿಡಲಾ ಮುನಿಗಡಣಂ |
ಸುರಪಾದಿಗಳಲ್ಲಿಗೈದಿದರು ಭರದಿಂದಂ ||
ದುರುಳರನಿದಿರಿಸೆ ಬಲು ಭೀ |
ಕರ ಕೋಲಾಹಲವದಾದುದಾ ಕ್ರತು ಸ್ಥಳದೊಳ್ || ೧ || 124 ||

ಕಾಂಭೋದಿ - ಝಂಪೆ
ಕಾಲಕೇತುವು ತನ್ನವರೊಳೆಂದ ಪಗಲಿನಾ |
ಕಾಲ ದನುಜರಿಗೆ ಪ್ರತಿಕೂಲ ||
ಕಾಲವಂಚನೆಗೈದು ಪಗಲೆಲ್ಲ ಸಾಗರದ |
ಆಳದೊಳಡಗಿರ್ದು ಬಳಿಕ || ೧ ||

ಕತ್ತಲಾಗಲು ಶರಧಿ ಗರ್ಭದಿಂ ಹೊರಬಿದ್ದು |
ನಿತ್ಯದೆಸಕವನು ಗೈಯುವುದೆ ||
ಉತ್ತಮವು ಮೈಗರೆವುದೀಗೆನುತ ದೈತ್ಯರಾ |
ಮೊತ್ತದೊಂದಿಗೆ ಮಾಯವಾದ || ೨ || 126 ||

ವಾರ್ಧಕ
ಕಾಲಕೇಯರು ಪಗಲೊಳಡಗಿ ಕಡಲೊಳು ರಾತ್ರಿ |
ಕಾಲದೊಳು ಮೇಲೆದ್ದು ಯಜ್ಞಾದಿ ಕರ್ಮಗಳ |
ಪಾಳುಗೆಡುಹುತಲಂತು ಗೋಳುಗುಟ್ಟಿಸಿದರಾ ದೇವತಾರಾಧಕರನು ||
ಸೋಲದೆಯೆ ಸಾಯದೆಯೆ ಸುಜನ ಕಂಟಕರಾದ |
ಖೂಳರನ್ನೆಂತು ನಿರ್ಮೂಲಿಸುವುದೆನುತ ಶ್ರೀ |
ಲೋಲನಿಂಗರಿಕೆಗೈಯುವೆವೆಂದು ಬಂದರಾ ಕ್ಷೀರಾಬ್ಧಿಯೆಡೆಗೆ ಜವದಿ || ೧ || 127 ||

ತೋಡಿ - ತ್ರಿವುಡೆ
ಜಯತು ಜಯ ನಾರಾಯಣಾ ಜಯ |
ಜಯತು ಕಷ್ಟ ನಿವಾರಣಾ ||
ಜಯತು ದುಷ್ಟವಿದಾರಣಾ ಜಯ |
ಜಯತು ಭಕ್ತ ಸಂಪೋಷಣಾ || ೧ ||

ಕ್ಷೀರ ಸಾಗರಶಯನ ಜಗದಾ |
ಧಾರ ಮೂರುತಿ ಶ್ರೀಧರಾ ||
ವಾರಿಜಾಂಬಕ ವರಪ್ರದಾಯಕ |
ಘೋರದುರಿತನಿವಾರಕಾ || ೨ || 129 ||

ಶ್ರೀಹರಿ ಪ್ರತ್ಯಕ್ಷ

ಷಣ್ಮುಖಪ್ರಿಯ - ರೂಪಕ
ಶೋಕದೊಳೆರಗಿದ ಪಾಕಶಾಸನ ಮುಖ್ಯ |
ನಾಕಿಗರನ್ನು ಸಂತೈಸಿ ||
ಆ ಕಮಲೇಕ್ಷಣ ಕರುಣದಿ ಕೇಳ್ದನಿ |
ದೇಕಿಂತು ಮರುಗುವುದೆನಲು || ೧ || 130 ||

ಮಧ್ಯಮಾವತಿ - ಏಕ
ದೇವಾಧಿದೇವನೆ ಕೇಳು ಬಿನ್ನಪವ |
ಭೂವಲಯದಿ ಕಾಲಕೇಯರು ಗೈವ ||
ಹಾವಳಿಗಳನೆಲ್ಲ ಬಣ್ಣಿಸಲರಿದು |
ದೇವ ಕಾರ್ಯಗಳ ಭಂಗಿಪರಯ್ಯ ಹಳಿದು || ೧ ||

ಯಾಗ ರಕ್ಷಣೆಗೆಂದು ನಾವೆ ಮುಂದಾಗಿ |
ಪೋಗಿ ದುಷ್ಟರನಲ್ಲಿ ತಡೆದೆವು ತಾಗಿ ||
ಆಗಲಾ ಧೂರ್ತರು ನಿಲದೋಡಿ ಪೋಗಿ |
ಸಾಗರದೊಳಡಗಿದರಲ್ಲಿ ಮುಳುಗಿ || ೨ ||

ನಿಶಿಯೊಳು ಮೇಲೇಳುತಾ ನಿಶಾಚರರು |
ವಿಷಮ ಕೃತ್ಯವಗೈದು ಸುಳಿದಾಡುತಿಹರು ||
ಅಸದಳವಹುದೆಮಗವರ ಸಂಹಾರ |
ಅಸುರಭಂಜನ ತೋರಿದಕೆ ಪರಿಹಾರ || ೩ || 133 ||

ಕಲ್ಯಾಣಿ - ಅಷ್ಟ
ಸುಮನಸರೆಂದುದನು | ಲಾಲಿಸುತಾಗ |
ಕಮಲೇಶ ತಾನೆಂದನು ||
ಅಮರರೆ ನೀವೆಂದುದರಿತೆ ಭೂಲೋಕದಿ |
ಕುಮತಿಗಳಹ ಕಾಲಕೇಯರ ಬಾಧೆಯ || ೧ ||

ಬಲ್ಲೆನು ನಿಗ್ರಹಿಸೆ | ಮುನಿಗಳಲ್ಲಿ |
ಬಲ್ಲಿದರಿರುವರೈಸೆ ||
ಖುಲ್ಲರನಳಿಸಲು ಬಲ್ಲನಗಸ್ತ್ಯ ನೀ |
ವಲ್ಲಿಗೈದುತ ಮುನಿ | ವಲ್ಲಭಗೊರೆವುದು || ೨ || 135 ||

ಭಾಮಿನಿ
ಹರಿಯ ವಚನವ ಕೇಳಿ ಮಣಿಯುತ |
ಸುರರು ಮತ್ತಾ ಕುಂಭಸಂಭವ |
ನಿರುವ ಪುಣ್ಯಾಶ್ರಮದ ಪೊರೆಗೈದಿದರು ವಹಿಲದಲಿ ||
ಧರೆಯಧಿಪ ತ್ರಸದಸ್ಯು ನೀಡಿದ |
ತರ ತರದ ಧನಕನಕ ದ್ರವ್ಯವ |
ತರಳೆಗೀಯುತ ತೋಷಬಡಿಸಿರ್ದನು ಮುನೀಶ್ವರನು || ೧ || 136 ||

ದೇವತೆಗಳ ಆಗಮನ

ಖರಹರಪ್ರಿಯ - ಅಷ್ಟ
ಶರಣಾದೆವಯ್ಯ ಮುನೀಂದ್ರ | ಮೈತ್ರಾ |
ವರುಣಿಯೆ ಕರುಣಾ ಸಮುದ್ರ ||
ಹರಿಯ ಮತದಿ ತವ ಚರಣವ ಸಾರ್ದೆವು |
ದುರುಳರಟ್ಟುಳಿಯನು ಪರಿಹರಿಸುವುದಯ್ಯ || ೧ ||

ಕಾಲಕೇಯರ ದುಷ್ಕೃತ್ಯಗಳ | ನಾವು |
ಪೇಳುವುದೇನಾ ಖಳರ ||
ಸೋಲಿಸದಾದೆವು ಪಗಲೊಳು ಸಾಗರ |
ದಾಳಕಿಳಿದು ನಿಶಿಕಾಲದೊಳೇಳ್ವರು || ೨ ||

ದುರುಳರ ವಧೆಗೆ ನೀನಿಂದು | ಎಮಗೆ |
ನೆರವಾಗು ಓ ಗುಣಸಿಂಧು ||
ಪರಮ ತಪೋಸಾಮರ್ಥ್ಯದಿ ಶರಧಿಯ ಹೀರೆ |
ಸುರದ್ವೇಷಿಗಳನು ಸಂಹರಿಪೆವು ಸುಲಭದಿ || ೩ || 139 ||

ಹಂಸಧ್ವನಿ - ತ್ರಿವುಡೆ **(ಸೌರಾಷ್ಟ್ರ - ತ್ರಿವುಡೆ)**
ಅಮರರಾ ಬಿನ್ನಪವನಾಲಿಸಿ |
ಯಮಿವರನು ತಾನೆಂದ ದುರುಳರ |
ದಮನಕನುಕೂಲಿಪೆನು ನೋಳ್ಪುದು | ನಿಮಿಷದೊಳಗೆ || ೧ ||

ಅಂಬುಧಿಯ ಆಪೋಶನ

ದನುಜ ಹನನಕೆ ಸಿದ್ಧರಪ್ಪುದು |
ಯೆನುತ ಸಾಗರ ತಟಕೆ ತೆರಳುತ |
ಘನಮಹಿಮ ವಾರಿಧಿಯನಾಪೋ | ಶನವ ಕೊಂಡ || ೨ ||

ಶರಧಿ ಭೋರ್ಗರೆವುತ್ತಲಾ ಮುನಿ |
ವರನ ಮುಖದೊಳಗಿಳಿಯೆ ಲೋಕವೆ |
ಬೆರಗುಗೊಂಡುದು ಜಲಧಿಯಾಕ್ಷಣ | ಬರತುದಲ್ಲಿ || ೩ ||

ಏನು ಏನಾಯ್ತೆಂಬ ಮೊದಲೇ |
ದಾನವರು ಸುಪ್ರಕಟರಾದರು |
ಗ್ಲಾನಿಗೊಳುತಲಿ ಬೆಬ್ಬಳಿಸಿದರು | ಹಾನಿಯರಿತು || ೪ ||

ಸುತ್ತುವರಿದರು ಸುರರು ಮತ್ತಾ |
ದೈತ್ಯರನು ನುಗ್ಗೊತ್ತಿ ಹಲಬರ |
ಕತ್ತ ಕಳಚುತ ಕಳುಹಿದರು ಯಮ | ಪತ್ತನಕ್ಕೆ || ೫ || 144 ||

ಅಗ್ನಿ ಮತ್ತು ಕಾಲಮುಖರ ನಡುವೆ ಯುದ್ಧ

ಶಂಕರಾಭರಣ - ಮಟ್ಟೆ
ದುರುಳ ದನುಜ ನಿಲ್ಲದೆಲ್ಲಿ ಭರದೊಳೈದುವೆ |
ಧರಣಿಯಲ್ಲಿ ಪರಮ ಅತ್ಯಾಚಾರ ಗೈದಿಹೆ ||
ಶರಧಿಯೊಳಗೆ ಅಡಗಿ ಧೂರ್ತತನವ ನಡೆಸಿದೆ |
ಶಿರವ ಕಳೆವ ಕಾಲ ಬಂತು ನಿನ್ನ ಪಾಲಿಗೆ || ೧ ||

ಭಳಿರೆ ದಿವಿಜವೀರ ಬಹಳ ಗಳಹಬೇಡೆಲಾ |
ಜಲಧಿ ಬರತರೇನು ಶೌರ್ಯ ಬರತುದಿಲ್ಲಲಾ ||
ಮಲೆತು ಮದದಿ ಮೆರೆಯುತಿಹಿರಿ ನಾಕಲೋಕದಿ |
ಇಳಿಪೆನೀಗ ಸುಧೆಯನುಂಡ ಸೊಕ್ಕ ನಿಮಿಷದಿ || ೨ || 146 ||

ವಾಯು ಮತ್ತು ಕಾಲಕೌತುಕರ ನಡುವೆ ಯುದ್ಧ

ಭೈರವಿ - ಅಷ್ಟ
ದುರ್ಮದ ದಾನವನೆ | ಜಗದ ಸ |
ದ್ಧರ್ಮದ ಹಾದಿಯನೆ ||
ನಿರ್ಮೂಲ ಗೈದಟ್ಟಹಾಸದಿ ಮೆರೆದಂಥ |
ಹೆಮ್ಮೆಯನಡಗಿಸುವೆ || ೧ ||

ಗಳಹ ಬೇಡೆಲೊ ವ್ಯರ್ಥದಿ | ಮಮ ಸಾಮರ್ಥ್ಯ |
ದಳವ ಕಾಣೆಲೊ ಯುದ್ಧದಿ ||
ಹಲವು ರಾಕ್ಷಸ ಬಲವಳಿಸಿದ ದಿವಿಜರ |
ಕುಲವನೆ ಕೋಳುಗೊಂಬೆ || ೨ || 148 ||

ವರುಣ ಮತ್ತು ಕಾಲನೇಮಿಯರ ನಡುವೆ ಯುದ್ಧ

ಭೈರವಿ - ಏಕ
ಫಡ ದೈತ್ಯನೆ ನಿಲ್ಲೆಲವೊ | ಸುರ |
ಗಡಣದಿ ಸೆಣಸುವ ಛಲವೋ ||
ದಡಿಗತನವ ಕಾಣಿಸಲು | ಉಸಿ |
ರಡಗಿಪೆನೀಕ್ಷಣ ಕೇಳು || ೧ ||

ಬಡ ದೇವತೆಯೇ ಕೇಳು | ಬಡ |
ಬಡಿಸದೆ ನೀ ಪಿಂತೆರಳು ||
ತುಡುಕಲು ನಾಕವ ಮುಂದೆ | ಕೈ |
ತಡೆಯುವರಾರೆಲೊ ಹಂದೆ || ೨ || 150 ||

ಇಂದ್ರ ಮತ್ತು ಕಾಲಕೇತು ನಡುವೆ ಯುದ್ಧ

ಭೈರವಿ - ಅಷ್ಟ
ಯಾರೆಲ ಮಘವನೇನೊ | ತವ ಪೌರುಷ |
ತೋರ ಬಂದಿರುವೆಯೇನು ||
ವಾರಿಧಿಯನು ವಂಚನೆಯಲಿ ಬತ್ತಿಸಿ ನಮ್ಮ |
ಗಾರುಗೆಡಿಪೆನೆಂಬೆಯ || ೧ ||

ಲೋಕ ಕಂಟಕರೆನಿಸಿ | ಸಜ್ಜನರನ್ನು |
ಶೋಕಕೆ ಗುರಿಪಡಿಸಿ ||
ಕಾಕು ಬುದ್ಧಿಯ ತೋರಿ ಮಲೆತುದಕೀವೆನು |
ಭೀಕರ ಶಿಕ್ಷೆಯನು || ೨ ||

ಪರಿಪರಿಯಿಂದಲೆಮ್ಮ | ಮೋಸವಗೈದು |
ಮೆರೆದುದಕೀಗ ನಿಮ್ಮ ||
ಗರುವಿಕೆಯನು ಮುರಿಯಲು ಕಾಲ ಬಂದುದು |
ಮರೆವೆನೆ ಹಿಂದಾದುದ || ೩ ||

ಧರ್ಮವ ಕೆಡಿಸಿದಗೆ | ಕೇಳೆಲೊ ಕಾಲ |
ಧರ್ಮ ತಾನಹುದು ಪಗೆ ||
ಹಮ್ಮು ಬಿಮ್ಮುಗಳತಿ ಬಾಳವು ನಿಶ್ಚಯ |
ದುರ್ಮತಿಯಳಿವೆಯೀಗ || ೪ || 154 ||

(ಕಾಲಕೇಯರ ಸಂಹಾರ)

ಸಾಂಗತ್ಯ - ರೂಪಕ
ಕಾಲೇಯ ಗಣವಿಂತು ಕಾಲಗತಿಯನೈದೆ |
ತಾಳಿ ಮುದವ ಸುಮನಸರು ||
ಖೂಳರ ವಧೆಗನುಕೂಲವಾದುದು ಮೌನಿ |
ಪಾಲ ನಿನ್ನಯ ಗೈಮೆಯಿಂದ || ೧ ||

ಶರಧಿಯ ಮುನ್ನಿನಂದದಿ ಗೈಯಬೇಕೆಲೆ |
ಕರುಣಿಯೆ ಎನಲು ಮುನೀಂದ್ರ ||
ಭರದಿ ವಮನಗೈಯೆ ಮರುಗಳಿಗೆಯೊಳಾಗ |
ಭರಿತವಾದುದು ಸಾಗರವು || ೨ ||

ಘನ್ನ ಮಹಿಮ ನಿನ್ನ ಸಾಮರ್ಥ್ಯಕೆಣೆಯಿಲ್ಲ |
ವೆನ್ನುತ ಬಹುವಿಧದಿಂದ ||
ಸನ್ನುತ ತೇಜನ ಮನ್ನಿಸುತತುಳ ಪ್ರ |
ಸನ್ನತೆಯೊಳು ತೆರಳಿದರು || ೩ || 157 ||

* * * * *

ಕಾಂಭೋದಿ - ಝಂಪೆ

ಇತ್ತಲಂಧಕ ದಿಗ್ವಿಜಯವ ಪೂರೈಸಿ ನಲ |
ವೆತ್ತಾ ಹಿರಣ್ಯಪುರದೊಳಗೆ ||
ದೈತ್ಯ ಸಂದೋಹವೆರಸುತ ವೈಭವಾತಿಶಯ |
ಯುಕ್ತನಾಗಿರ್ದ ತೋಷದೊಳು || ೧ ||

ಧನಕನಕ ದ್ರವ್ಯಗಳಿಗೆಣಿಕೆಯಿರದಾಯ್ತು ನೂ |
ತನ ವಿಲಾಸಗಳು ಪೆಗ್ಗಳಿಸೆ ||
ಮನ ಸೂರೆಗೊಳುವಂಥ ನಾಟ್ಯ ಸಂಗೀತದೊಳು |
ದನುಜ ಸಂಸ್ಕೃತಿಯು ವರ್ಧಿಸಿತು || ೨ ||

ಭಜಿಸಲಾಗದು ಹರಿಹರಾದಿ ದೇವರ್ಕಳನು |
ಸೃಜಿಸಲಾಗದು ದೇಗುಲಗಳ ||
ಯಜನ ತೀರ್ಥಸ್ನಾನ ವೇದ ಘೋಷಗಳಿಲ್ಲ |
ದ್ವಿಜ ಕರ್ಮಕಿಂಬಿಲ್ಲವಾಯ್ತು || ೩ ||

ದೂತನ ಆಗಮನ

ಭೂಲೋಕ ದಿಗ್ವಿಜಯಗೈದುದಾಯಿತು ಮುಂದೆ |
ಮೇಲು ಲೋಕವ ಜೈಸಬೇಕುಯೆನುತ ||
ಆಲೋಚಿಸುತ್ತಿರಲು ದೂತನೋರ್ವನು ಬಂದು |
ಪೇಳಿದನು ದುರ್ವಾರ್ತೆಯೊಂದ || ೪ || 161 ||

ಮುಖಾರಿ - ಏಕ

ಕೇಳಯ್ಯ ನುಡಿಯ ದೈತ್ಯರಾಯ | ಸುಳ್ಳಲ್ಲ ಒಡೆಯ |
ಪೇಳುವೆ ನಡೆದ ಸಂಗತಿಯ ||
ಕಾಳಗದೊಳು ನಮ್ಮ ಕಾಲೇಯರ ಸುರ | ಪಾಲಾದಿಗಳು ನಿ |
ರ್ಮೂಲವ ಗೈದರು || ೧ ||

ಕೊಡನ ಕುವರನೆಂಬ ಮುನಿಯು | ಆ ಕಡಲನ್ನು |
ಕುಡಿದನಬ್ಬಬ್ಬ ಗಟಗಟಯೆಂದು |
ಅಡಗಿರ್ದೆಮ್ಮವರನು ತುಡುಕುತ್ತಲಿ | ಮಡುಹಿದರಾ |
ಬಿಡುಗಣ್ಣರು ಮೋಸದಿ || ೨ || 163 ||

ಸೌರಾಷ್ಟ್ರ - ತ್ರಿವುಡೆ
ದೂತರೆಂದಾ ಮಾತ ಕೇಳುತ |
ಯಾತುಧಾನೇಂದ್ರನು ಮಸಗಿ ಕೋ |
ಪಾತಿಶಯದಲಿ ಪೇಳ್ದನೀ ಪರಿ | ಘಾತವಾಯ್ತೆ || ೧ ||

ಬಂಧುಗಳನಾ ಕಾಲಕೇಯರ |
ಕೊಂದರೇ ಬರ್ದಿಲರು ಕೈತವ |
ದಿಂದ ಬರಿದೇ ಬಿಡಬಹುದೆ ಸುರ | ವೃಂದವನ್ನು || ೨ ||

ಮೊದಲು ಸೀಳುವೆ ಕುಹಕಿ ಕುಂಭಜ |
ನುದರವನು ನಮ್ಮವರನಾ ಯಮ |
ಸದನಕಟ್ಟಿದುದಕ್ಕೆ ಬಳಿಕಾಂ | ಸದೆವೆ ಸುರರ || ೩ ||

ನಾರದನ ಪ್ರವೇಶ

ಎಂದು ಮಸಗುತ್ತಿರಲು ಮಹತಿಯ |
ನಂದು ನುಡಿಸುತ ನಾರದನು ಬರ |
ಲಂಧಕಾಸುರನುಪಚರಿಸಿದನು | ಚೆಂದದಿಂದ || ೪ || 167 ||

ಕೇದಾರಗೌಳ - ಅಷ್ಟ
ಸುರಮುನಿ ನಿನ್ನಯ ಬರವಿನಿಂದಲಿ ಹರ್ಷ |
ಭರಿತನಾದೆನು ಧನ್ಯನು ||
ಸರುವ ಲೋಕಂಗಳ ಚರಿಸುವ ಮುನಿಯೆನ್ನೊ |
ಳರುಹು ವಿಶೇಷಂಗಳ || ೧ || 168 ||

ಬೇಗಡೆ - ತ್ರಿವುಡೆ
ಕೇಳು ದಾನವ ಸಾರ್ವಭೌಮಕನೆ | ತವ ಶೌರ್ಯದೇಳ್ಗೆಗೆ |
ಹೋಲುವರ ತ್ರೈಜಗದಿ ನಾಕಾಣೆ ||
ತಾಳಿ ಮುದವನು ಬಂದೆ ನಿನ್ನಯ |
ಏಳಿಗೆಯ ಕಣ್ಣಾರೆ ಕಾಂಬಡೆ |
ಕೇಳಿ ಬರುತಿಹುದಿಂದು ವಿಖಿಳ ದಿ |
ಶಾಳಿಯೊಳು ತವ ಕೀರ್ತಿ ಡಿಂಡಿಮ || ೧ || 169 ||

ಕೇದಾರಗೌಳ - ಅಷ್ಟ
ತೋಷವಾಯ್ತೆಲೆ ಮೌನೀಶನೆ ಇನಿತು ಸು |
ವಾಸನೆಯನು ಬೀರುವ ||
ಈ ಸುಮಮಾಲೆ ವಿಶೇಷವೆಂದೆನಿಪುದು |
ಭೂಷಣವಾರಿತ್ತರು || ೧ || 170 ||

ಬೇಗಡೆ - ತ್ರಿವುಡೆ

ವರ ಮಹಾ ಕೈಲಾಸ ತಪ್ಪಲಲಿ | ಮಂದಾರ ವನದೊಳ |
ಗಿರುವ ನೈಮಿಷವೆಂಬ ಸರಸಿಯಲಿ ||
ಅರಳುತಿಹ ಹೊಂದಾವರೆಗಳನು |
ಗಿರಿಜೆ ವಾತ್ಸಲ್ಯದೊಳು ಇತ್ತುಡೆ |
ಪರಮ ಸಾರ್ಥಕ ಭಾವದಲಿ ನಾ |
ಧರಿಸಿಹೆನು ಈ ದಿವ್ಯಮಾಲೆಯ || ೧ || 171 ||

ಕೇದಾರಗೌಳ - ಅಷ್ಟ

ಮುನಿವರ ಈ ದಿವ್ಯವನಜದ ಮಹಿಮೆಗ |
ಳೆನಿತೊ ಬಗೆಗೆ ಬಾರದು ||
ಮನ ಸೂರೆಯಾದುದು ಸೌಂದರ್ಯ ಮತ್ತಿದ |
ರನುಪಮ ಸೌಗಂಧಕೆ || ೧ || 172 ||

ಬೇಗಡೆ - ತ್ರಿವುಡೆ

ಈ ಸರೋಜವು ಬಾಡದೆಂದೆಂದೂ | ಈ ದಿವ್ಯ ಸೌರಭ |
ಮಾಸದೆಯೆ ಅವಿನಾಶಿಯಾಗಿಹುದು ||
ಈ ಸುಮವ ಧರಿಸಲ್ಕೆ ಲೇಸಿನೊ |
ಳಾ ಸಕಲ ಸೌಭಾಗ್ಯ ಸಾರ್ವುದು |
ಕ್ಲೇಶ ಕಳೆಯುವ ಮಹಿಮೆಯಿರ್ಪುದು |
ವಾಸವಾದ್ಯರಿಗಹುದು ದುರ್ಲಭ || ೧ || 173 ||

ಭಾಮಿನಿ

ಭಳಿರೆ ಮುನಿಪನೆ ಲೇಸನಾಡಿದೆ |
ಅಳುಪಿದೆನು ಆ ದಿವ್ಯ ನಳಿನಕೆ |
ಕೊಳವನರಸುತ ಕೊಂಬೆ ಸಾರಸಗಳನು ಸಾಹಸದಿ ||
ಒಲವಿರಲಿಯೆನುತೆರಗುತಾ ಮುನಿ |
ತಿಲಕನನು ಬೀಳ್ಕೊಟ್ಟು ತಾನತಿ |
ಘಳಿಲನಂಧಕ ಪೊರಟನಾ ಮಂದಾರ ವನದೆಡೆಗೆ || ೧ || 174 ||

*   *   *   *   *

ಭೈರವಿ - ಝಂಪೆ

ಕೈಲಾಸ ಶಿಖರದಲಿ | ಶೈಲಜೆಯ ಸಹಿತ ಸ |
ಲ್ಲೀಲೆಯಿಂದಿರ್ದನಾ | ಫಾಲಲೋಚನನು || ೧ ||

ಗೌರಿಯ ಕೋರಿಕೆ

ಗೌರಿ ತಾ ವಿನಯದಿಂ | ಮಾರಮಥನಂಗೆರಗಿ |
ಕೋರಿಕೆಯನಾಡಿದಳು | ನೀರನೊಡನಾಗ || ೨ || 176 ||

ಸಾಂಗತ್ಯ - ರೂಪಕ
ಸ್ವಾಮಿಯೆ ಲಾಲಿಸು ಮಂದಾರ ವನ ಮಧ್ಯ |
ನೈಮಿಷ ಸರಸಿಗೆ ಸಾರ್ದು ||
ನಾ ಮನದಣಿಯೆ ಸಲಿಲ ಕೇಳಿಯಾಡುವ |
ಕಾಮನೆಯಾಯ್ತೆನಗಿಂದು || ೧ || 177 ||

ಕೇದಾರಗೌಳ - ಝಂಪೆ
ನಗುತೆಂದನಗಜೇಶನು | ನೀರ ಕೇ |
ಳಿಗೆ ಮನವನಿತ್ತೆಯೇನು ||
ಬಗೆವೊಡಿದು ಪೊಸತು ಬಯಕೆ | ನೀರಾಟ |
ಮುಗಿಸಿ ಬಾ ಜವದಿ ಜೋಕೆ || ೧ || 178 ||

ಸಾಂಗತ್ಯ - ರೂಪಕ
ಸಂದೇಹವೇಕೆ ಮಂದಾರ ವನವ ಯಕ್ಷ |
ವೃಂದವು ರಕ್ಷಿಸುತಿಹುದು ||
ಚೆಂದದಿ ಜಲಕೇಳಿಯಾಡಿ ಸಖೀಜನ |
ದೊಂದಿಗೆ ಬಹೆನತಿ ಬೇಗ || ೧ || 179 ||

ಕೇದಾರಗೌಳ - ಝಂಪೆ
ನಲ್ಲೆ ನೀನೆಂದ ಮಾತ | ಅಲ್ಲೆನುವ |
ನಲ್ಲ ನೀ ಪೋಗಲತ್ತ ||
ಅಲ್ಲೇನೋ ಘಟಿಪುದೆಂದು | ಮಮ ಚಿತ್ತ |
ದಲ್ಲಿ ಸ್ಫುರಿಸುತ್ತಲಿಹುದು || ೧ || 180 ||

ಸಾಂಗತ್ಯ - ರೂಪಕ
ರಮಣ ವ್ಯರ್ಥದೊಳೇಕೆ ಭ್ರಮೆಯಿದನಿಷ್ಟವು |
ಸಮನಿಸಲಾನದ ನೋಳ್ಪೆ ||
ವಿಮಲ ಸರೋವರಕೈದುವೆನೆನ್ನುತ |
ನಮಿಸಿ ಪೋದಳು ಸರಸದಲಿ || ೧ || 181 ||

ಕಂದ
ಬಳಿಕ ಸಖೀಜನ ಸಹಿತಂ |
ಜಲ ಕೇಳಿಯ ಮೊಗಸಿ ಗೌರಿ ನೈಮಿಷವೆನುವಾ ||
ನಳಿನಾಕರದೆಡೆಗೈದುತ |
ಬಲುತೋಷದೊಳಾಡೆ ನೀರ ಕೇಳಿಯನಾಗಳ್ || ೧ || 182 ||

ಗೌರಿಯ ನೀರಾಟ

ನವರೋಜು - ಏಕ
ಆಡಿದಳು ಶ್ರೀಗೌರಿ | ಜಲ |
ಕ್ರೀಡೆಯ ಬಿನದವ ತೋರಿ ||
ಮಾಡುತ ಚೇಷ್ಟೆಯ ಬೊಗಸೆ ಜಲವ ನೀ |
ಡಾಡುತ ಬೊಬ್ಬಿಡುತಾಡುತ ಪಾಡುತ || ೧ ||

ತಿಳಿಯದಿಹ ತೆರದಿಂದ | ತಾನ್ |
ಮುಳುಗುತ ನೀರೊಳಗಿಂದ ||
ಘಳಿಲನೆ ಕಾಲನು ಬಳಸುತ ಸೆಳೆಯುತ |
ಕಿಲ ಕಿಲನೆಂದುರೆ ನಗುತಾನಂದದಿ || ೨ || 184 ||

ಯಕ್ಷನಾಯಕನ ಪ್ರವೇಶ

ವಾರ್ಧಕ (ಅರ್ಧ)
ಆ ಸಮಯಕಂಧಕನು ಮಂದಾರ ಶ್ರೀ ವನವ |
ತಾ ಶೋಧಿಸುತ್ತ ಬರಲದರ ರಕ್ಷಣೆಯ ಯ |
ಕ್ಷೇಶನಾಗಿಹ ವಿಭಾವಸುವಂಧಕನ ತಡೆಯುತಿಂತೆಂದನಾಗ ಭರದಿ || ೧ || 185 ||

ಭೈರವಿ - ಅಷ್ಟ
ಆರೆಲೊ ದನುಜಾಧಮ | ದುರ್ಗಮವೀ ಮಂ |
ದಾರ ಕಾನನವಮಮ ||
ಭೋರನೆ ಮೀರಿ ಪ್ರವೇಶವಗೈಯಲು |
ಆರಪ್ಪಣೆಯನಿತ್ತರು || ೧ || 186 ||

ಭೈರವಿ - ಏಕ
ಆರೆಲೊ ತಡೆಯುವ ವೀರ | ಜಗ |
ಮೂರೊಳಗಾನೇ ಶೂರ ||
ಆರಪ್ಪಣೆಯಂಧಕಗೆ | ಕೆಲ |
ಸಾರೆಲೊ ಎಚ್ಚರ ನಿನಗೆ || ೧ || 187 ||

ಭೈರವಿ - ಅಷ್ಟ
ಅಂಧಕಾಸುರನೇನೆಲಾ | ಸುಪವಿತ್ರ ವೀ |
ಮಂದಾರವನ ಕೇಳೆಲಾ ||
ಚೆಂದದೀ ವನವ ರಕ್ಷಿಸುವ ವಿಭಾವಸು |
ಯೆಂದೆನ್ನ ಕರೆವರೆಲಾ || ೧ || 188 ||

ಭೈರವಿ - ಏಕ
ಕಾವಲ ಯಕ್ಷನೆ ಕೇಳಾ | ವರ |
ಸಾವಿರ ದಳಗಳ ಕಮಲ ||
ಆವ ಸರೋವರದೊಳಗೆ | ಆ |
ಹೂವರಳಿದೆ ಪೇಳೆನಗೆ || ೧ || 189 ||

ಭೈರವಿ - ಅಷ್ಟ
ಮಂದಮತಿಯೆ ಕೇಳೆಲಾ | ನೈಮಿಷ ಪುಷ್ಪ |
ಕೆಂದಿಲ್ಲಿಗೈತಂದೆಯ ||
ಬಂದ ದಾರಿಗೆ ಸುಂಕವಿಲ್ಲ ಮುಂದಡಿಯಿಡೆ |
ಬಂದಿತು ನಿನಗಂತ್ಯವು || ೧ || 190 ||

ಭೈರವಿ - ಏಕ
ಗಳಹುವೆಯೇಕೆಲೊ ಯಕ್ಷ | ನಿ |
ನ್ನಳಿವಿಯೆನಗೆ ನಿರ್ಲಕ್ಷ ||
ಸುಲಲಿತ ಸುಮವನು ಕೊಂಡೈವೆ | ಎಲೊ |
ಹುಲು ಯಕ್ಷನೆ ಏಂಗೈವೆ || ೧ || 191 ||

(ಯುದ್ಧ – ಯಕ್ಷನ ಸೋಲು)

ಭಾಮಿನಿ (ಅರ್ಧ)
ಯಕ್ಷನನು ಬಡಿದೋಡಿಸುತಲಾ |
ರಾಕ್ಷಸೇಂದ್ರನು ಮುಂಬರಿದು ತಾ |
ನೀಕ್ಷಿಸಿದನಾ ಭವ್ಯ ನೈಮಿಷನಾಮ ಸರಸಿಯನು || ೧ || 192 ||

ಅಠಾಣ - ರೂಪಕ
ತೆರೆಯ ಹೊಮ್ಮಿಪ ದಿವ್ಯಸರಸಿಯ ಕಾಣುತ |
ಬೆರಗಾದನಸುರೇಶನಾಗ ||
ಅರಳಿಯೆ ಮಘಮಘಿಸುವ ಪುಷ್ಪಗಳ ಮಧ್ಯೆ |
ಸರಸಿಜಮುಖಿಯರ ಕಂಡ || ೧ ||

ನೀರಾಟವಾಡುವ ಚಾರುಹಾಸಿನಿಯರ |
ಘೋರನೆ ಕಾಣುತಂಧಕನು ||
ಸಾರಿ ಸನಿಯಕೈದಿ ಮೋದದಿ ತಾ ಲಜ್ಜೆ |
ಮೀರಿ ದಿಟ್ಟಿಸಿದನಂದವನು || ೨ ||

ತಾರಕೆಗಳ ಮಧ್ಯೆ ತೊಳಗುವ ಚಂದ್ರನ |
ಮೀರುವ ಚೆಲುವಿಕೆಯಾಕೆ ||
ಯಾರೆಂಬುದರಿಯದೆ ಗೌರಿಯ ಲಾವಣ್ಯ |
ಸಾರಕೆ ಬೆರಗಾಗಿ ಪೋದ || ೩ ||

ಜಲವ ಬಿಟ್ಟೇಳುತ ವಸನ ಭೂಷಣಗಳ |
ನಳವಡಿಸುತ್ತಿರಲಾಗ ||
ಸುಲಲಿತ ಸೌಂದರ್ಯ ಪಾಶಕೆ ವಶನಾಗಿ |
ಖಳನೆಂದ ತಡೆಯದಾ ಕ್ಷಣದಿ || ೪ || 196 ||

ಕಾಪಿ - ಅಷ್ಟ
ಯಾರೆಲೆ ಭುವನ ಮೋಹಿನಿಯೆ | ದಿವ್ಯಾ |
ಕಾರೆಯೆ ನಿರುಪಮ ಸೌಂದರ್ಯ ಖನಿಯೆ ||
ನೀರಾಟಕೆಂದು ಬಂದಿಹೆಯ | ಪೇಳು |
ಯಾರು ನಿನ್ನವರೆಂಬ ಸಕಲ ಸಂಗತಿಯ || ೧ || 197 ||

ಕಾಂಭೋದಿ - ಏಕ
ಅಸುರನೆಂದ ನುಡಿಯ ಕೇಳ್ದು |
ವಿಷಮನೇತ್ರನರಸಿ ಮನದಿ |
ರುಷಿತೆಯಾದಳಿವನು ಮೋಹ | ವಶನು ಯೆನುತಲಿ || ೧ ||

ಯಾರೆಂದು ವಿಚಾರಿಸುವಾ |
ಪಾರುಪತ್ಯವಿತ್ತರಾರೊ |
ನೀರಾಟವಾಡುತಿರೆ ಬಂದ | ಕಾರಣವೇನೊ || ೨ || 199 ||

ಕಾಪಿ - ಅಷ್ಟ
ಕೆರಳಬೇಡೆಲೆ ಮುದ್ದು ರನ್ನೆ | ಇಲ್ಲಿ |
ಅರಳಿರ್ಪ ದಿವ್ಯ ಹೊಂದಾವರೆಗಳನೆ ||
ಪರಿಕಿಸಲೆಂದು ನಾ ಬಂದೆ | ನಿಮ್ಮ |
ಸರಸದಾಟಗಳ ನೋಡುತ್ತಲೆ ನಿಂದೆ || ೧ || 200 ||

ಕಾಂಭೋದಿ - ಏಕ
ಈಯಲಭ್ಯ ತೋಯಜಗಳ |
ಆಯಲೆಂದು ಚೋರತನದು |
ಪಾಯದಿಂದ ಬಂದೆಯೇನೊ | ಹೇಯತನದಲಿ || ೧ || 201 ||

ಕಾಪಿ - ಅಷ್ಟ
ಚೌರ್ಯಕಾರ್ಯಕ್ಕೆ ಬಂದುದಿಲ್ಲ | ದೈತ್ಯ |
ಸಾರ್ವಭೌಮನು ಅಂಧಕನು ನಾನೆ ಕೇಳಾ ||
ಭಾರ್ಯೆಯಪ್ಪೆಯ ಪೇಳ್ವುದೀಗ | ಎನ್ನ |
ಸರ್ವ ಸೌಭಾಗ್ಯಕೀಶ್ವರಿಯಪ್ಪ ಯೋಗ || ೧ || 202 ||

ಕಾಂಭೋದಿ - ಅಷ್ಟ
ಸರಸವೇನೊ ಮೂಢ ಶರ್ವ |
ನರಸಿ ಸರ್ವೇಶ್ವರಿಯೊಳಿಂತು |
ಮರುಳು ಮಾತನಾಡಲು ಸು | ಟ್ಟುರುಹಿ ಪೋಗುವೆ || ೧ || 203 ||

ಕಾಪಿ - ಅಷ್ಟ
ನೀನೆ ಸರ್ವೇಶ್ವರಿಯೆನುತ | ತಿಳಿ |
ದಾನಂದವಾದುದು ಚೆಲುವೆ ಕೇಳಿತ್ತ ||
ನೀನೆತ್ತ ಆ ಶಿವನೆತ್ತ | ಗುಣ |
ಹೀನ ದರಿದ್ರನು ಅರಸಿಕಚಿತ್ತ || ೧ || 204 ||

ಕಾಂಭೋದಿ - ಏಕ
ಹರನ ನಿಂದೆ ಗೈವೆಯೇನೊ |
ಪರಮ ಪಾಪಿ ನಿನ್ನ ಭ್ರಾಂತು |
ಉರುಳು ನಿನ್ನ ಕೊರಳಿಗಿದನು | ಅರಿತುಕೊಳ್ಳೆಲಾ || ೧ || 205 ||

ಕಾಪಿ - ಅಷ್ಟ
ಮರುಳನ್ನು ಕವಿಸಿರ್ಪೆ ನೀನು | ಇನ್ನು |
ಪರಿಹಾರ ನಿನ್ನಿಂದಲದಕೆ ಮತ್ತೇನು ||
ಅರಸಿಯಾಗೆಲೆ ಎನ್ನೊಳೊಲಿದು | ಸುಖ |
ಸುರಿದುಣ್ಣು ಬಾ ಪ್ರೇಮನಾಟ್ಯದಿ ನಲಿದು || ೧ || 206 ||

ಭಾಮಿನಿ
ಸ್ಮರನ ಭ್ರಮೆಯಿಂದಂಧಕನು ಶಂ |
ಕರಿಯ ಬೆಂಬತ್ತಲ್ಕೆ ದುರುಳಗೆ |
ಮರುಳಮರಿದುದುಯೆನುತ ಶಿವೆ ತನ್ನೊಂದು ಮಹಿಮೆಯಲಿ ||
ನೆರಹೆ ತನ್ನಯ ಛಾಯೆಗಳನವು |
ಗಿರಿಜೆಯಂದದಿ ತೋರಲಾ ನೂ |
ರ್ವರಲಿ ಉಮೆ ಯಾರೆಂಬುದರಿಯದೆ | ಭ್ರಮೆಯೊಳಿರಲಸುರ || ೧ || 207 ||

ವಾರ್ಧಕ
ತನ್ನ ನೂರೊಂದು ಛಾಯೆಗಳು ಭೂಲೋಕದಲಿ |
ಭಿನ್ನ ರೂಪದಿ ನೆಲಸಲೆಂದು ಆದೇಶಿಸುತ |
ತನ್ನಾಪ್ತ ಸಖಿಯರೊಡನಂಬಿಕೆಯು ಕೈಲಾಸಕೈದಿದಳು ಜವದೊಳಂದು ||
ಕಣ್ಣ ಮುಂದಿನ ರೂಪುಗಳು ಕರಗಲಂಧಕನು |
ಬಣ್ಣಗುಂದುತಲೊಂದು ಕ್ಷಣದೊಳೆಣ್ಣಿದ ಕಜ್ಜ |
ಹಣ್ಣದೆಯೆ ಪೋದುದೇ ವಿರಮಿಸೆನು ಆ ಪೆಣ್ಣನೊಮ್ಮೆಗಾದರು ಪೊಂದದೆ || ೧ || 208 ||

ಕೇದಾರಗೌಳ - ಅಷ್ಟ
ಮಂದಾರ ವನದಿಂದ ಕುಂದಿದ ಮನದಿಂದ |
ಪಿಂದಿರುಗಿದನಂಧಕ ||
ಕಂದರ್ಪನುರಿಯೊಳು ಬೆಂದು ತಾ ವ್ಯಗ್ರತೆ |
ಯಿಂದ ತಲ್ಲಣದಿಂದಿರ್ದ || ೧ ||

ಲೋಕ ಸುಂದರಿಯನ್ನು ಪಡೆಯದ ಈ ಜನ್ಮ |
ವೇಕೆ ವ್ಯರ್ಥವು ದಿಟವು ||
ಲೋಕ ವಿಶ್ರುತ ಕೀರ್ತಿ ವೈಭವವದು ತೃಣ |
ವೀಕೆಯ ಚೆಲುವಿದಿರು || ೨ ||

ನಿಲ್ಲದು ಜೀವವಾ ಫುಲ್ಲಾಕ್ಷಿಯನು ಪಡೆ |
ದಲ್ಲದೆ ಸರ್ವಸ್ವವು ||
ಎಲ್ಲವು ಸೂರೆಯಾಗಲಿ ಪಾರ್ವತಿಗಾನು |
ವಲ್ಲಭನೆನಿಸುವೆನು || ೩ ||

ಅಂಧಕನ ಸ್ವಪ್ನ

ಎಂದು ನಾನಾ ವಿಧದಿಂದ ಯೋಚಿಸುತಿರ್ದ |
ನಂಧಕ ಭ್ರಾಂತಿಯೊಳು ||
ಅಂದಿರುಳಲಿ ಹಾಸಿನಲಿ ಪೊರಳುತ ಕಂಡ |
ನೊಂದು ಚೋದ್ಯದ ಸ್ವಪ್ನವ || ೪ ||

ಗಿರಿಜೆಯೋರ್ವಳೆ ಸರೋವರಕಿಳಿಯುತ ತನ್ನ |
ನಿರದೆ ಪ್ರೇಮದಿ ಕರೆಯೆ ||
ಸರಸದಿ ಶಂಕರಿಯೊಡನೆ ಸಲಿಲ ಕೇಳೀ |
ನಿರತನಾದಂದದಲಿ || ೫ ||

ಕನಸ ಕಂಡನು ಸುಖವುಂಡನು ತಟ್ಟನೆ |
ಕನಸು ಸಿಡಿದು ಪೋಗಲು ||
ಮನದಿ ವಿಭ್ರಮಿಸುತ್ತ ಹಲವೆಣಿಸುತಲಿರೆ |
ಇನನುದಿಸಿದ ಪೂರ್ವದಿ || ೬ || 214 ||

ಹಂಸಧ್ವನಿ - ತ್ರಿವುಡೆ **(ಸೌರಾಷ್ಟ್ರ - ತ್ರಿವುಡೆ)**
ನೆರಹಿದೋಲಗದಲ್ಲಿ ದಾನವ |
ರೆರೆಯನೆಂದನು ನಿನ್ನೆ ನೈಮಿಷ |
ಸರಸಿಯಲಿ ನಾ ಕಂಡೆ ಶಂಭುವಿ | ನರಸಿಯನ್ನು || ೧ ||

ಮಾರು ಹೋದುದು ಮನವು ಮತ್ತಾ |
ನಾರಿಯನು ಕೈಲಾಸದಿಂದಪ |
ಹಾರಗೈಯಲ್ಕೆಳಸಿರುವೆ ನಾ | ವೀರತನದಿ || ೨ ||

ಏನು ನಿಮ್ಮಭಿಮತವುಯೆನಲಭಿ |
ಮಾನದಿಂದಲಿ ನಮುಚಿ ನುಡಿದನು |
ನೀನು ಬಯಸಿದುದುಚಿತ ಪೊರಡುವು | ದೀನಿಮಿಷದಿ || ೩ ||

ಶೂರ ಶಂಬರನೆಂದ ನಮ್ಮಯ |
ತಾರಕಾದಿಗಳನ್ನು ಕೊಂದ ಕು |
ಮಾರನಬ್ಬೆಯ ತಹುದದಕೆ ಪ್ರತಿ | ಕಾರವಹುದು || ೪ || 218 ||

ಭಾಮಿನಿ
ದನುಜರಾಡಿದ ನುಡಿಗೆ ಅಂಧಕ |
ಮನದಿ ಹರುಷವನಾಂತು ಮತ್ತೆಂ |
ದನು ಮೊದಲು ಕೈಲಾಸಕೈದಲಿ ನಮ್ಮವರೊಳೋರ್ವ ||
ಸನುಮತದೊಳುಮೆಯನ್ನು ಶಂಕರ |
ನೆನಗೆ ಸಾದರದಿಂದಲೊಪ್ಪಿಸ |
ಲೆನುತ ಸಂದೇಶವನು ಒಯ್ಯುದು ಸುಂದನೀ ದಿನದಿ || ೧ || 219 ||

ಸುಂದಸಂಧಾನ

ನಾದನಾಮಕ್ರಿಯೆ - ಅಷ್ಟ

ಎಂದ ಮಾತನು ಕೇಳ್ದು ಸುಂದನು | ದೈತ್ಯ |
ಸಂದೇಶವನ್ನೊಯ್ವೆನೆಂದನು ||
ಮುಂದುವರಿದನು ಕೈಲಾಸಕೆ | ಜವ |
ದಿಂದಲೈದಿದ ಶಿವನ ಸನಿಹಕೆ || ೧ ||

ಸಾರಿ ಬಂದಸುರನ ಕಾಣುತ್ತ | ಮಾ |
ರಾರಿ ತಾ ಚೋದ್ಯವ ತಾಳುತ್ತ ||
ಯಾರು ನೀನೆಲ್ಲಿಂದಲೈತಂದೆ | ಬಂದ |
ಕಾರಣವೊರೆವುದು ತ್ವರೆಯಿಂದೆ || ೨ || 221 ||

ಅಠಾಣ - ರೂಪಕ

ಹರನೆ ಲಾಲಿಸು ಹಿರಣ್ಯಾಂಕ ಮಹಾಪುರ |
ದೆರೆಯನಂಧಕನಾಪ್ತ ನಾನು ||
ಕರೆವರು ಸುಂದನೆಂದೊಂದು ಸಂದೇಶವ |
ನೊರೆಯಲಟ್ಟಿಹನೆನ್ನ ದೊರೆಯು || ೧ ||

ತವ ಸತಿಯನು ಕಂಡು ಮೆಚ್ಚಿಹನೆಮ್ಮ ದಾ |
ನವಪತಿಯಾಕೆಯ ವರಿಪ ||
ತವಕದೊಳಿಹನಿದನರಿತು ಸಾಮದೊಳು ನೀ |
ನವಳನು ಕಳುಹಿ ಕೊಡುವುದು || ೨ ||

ಮಾತನಾಲಿಸಿ ಗಹಗಹಿಸುತೆಂದನು ಗೌರಿ |
ನಾಥನಾ ಸುಂದನೊಳಂದು ||
ಯಾತುಧಾನಗೆ ಇಂತು ಲೋಕೇಶನಾಗುವ |
ಆತುರವಡರಿತೆ ಮನಕೆ || ೩ ||

ಯುದ್ಧಮುಖದೊಳೆನ್ನ ಗೆದ್ದು ಶಿವೆಯ ಶಕ್ಯ |
ವಿದ್ದರೆ ಪಡೆಯಲಿ ಕೇಳು ||
ಬದ್ಧವೀ ನುಡಿಯಸುರೇಂದ್ರ ತನ್ನಯ ಶಕ್ತಿ |
ಯಿದ್ದುದನೆಲ್ಲ ಕಾಣಿಸಲಿ || ೪ || 225 ||

ಕಂದ

ಹರನಿಂತೆನೆ ಸುಂದಂ ಪಿಂ |
ತೆರಳುತಲಂಧಕನ ಬಳಿಗೆ ಬಂದತಿ ತ್ವರೆಯೊಳ್ ||
ಎರಗುತಲೆಂದಂ ಪುರಹರ |
ನೊರೆದಾ ಪ್ರತಿ ಸಂದೇಶದ ಬಗೆಯನ್ನಾಗಳ್ || ೧ || 226 ||

ಸೌರಾಷ್ಟ್ರ - ತ್ರಿವುಡೆ
ಕೇಳುತಂಧಕ ಭಳಿರೆ ಭಸ್ಮೋ। |
ದ್ಧೂಳ ಭಾಮಿನಿಯನ್ನು ಕಳುಹದೆ |
ಕಾಳಗವನೆಳಸಿದನೆ ಸಲ್ಲದು | ಕಾಲಹರಣ || ೧ ||

ಏಳಿ ನಮ್ಮವರೆಲ್ಲರೀಗಲೆ |
ಶೂಲಿಯನ್ನಿದಿರಿಸಲು ನಮ್ಮ ವಿ |
ಶಾಲ ಸೈನ್ಯವು ತುಹಿನಗಿರಿಯೆಡೆ | ಧಾಳಿಯಿಡಲಿ || ೨ ||

ಕೇಶಿನಿಯ ಆಗಮನ

ಎಂಬ ನುಡಿಯನು ಕೇಳುತಾಗಲೆ |
ರಂಭ ಹುಂಡ ತುಹುಂಡ ಶಾಲಿ ಕು |
ಕುಂಭ ಶಂಬರ ಪ್ರಮುಖ ದನುಜಕ | ದಂಬ ಪೊರಡೆ || ೩ ||

ಅಸುರ ಸೇನೆಯು ಮಸಗುತಿರಲಾ |
ವಿಷಯವರಿಯುತ ಕೇಶಿನಿಯು ತಾ |
ವ್ಯಸನದಿಂದಲಿ ಬಂದು ಕಂಡಳು | ಅಸುರ ಪತಿಯ || ೪ || 230 ||

ಕಾಂಭೋದಿ - ಏಕ
ವಲ್ಲಭಾ ನೀನವಸರದೊಳ |
ಗೆಲ್ಲಿಗೈದುತಿರುವೆಯೆಂಬು |
ದೆಲ್ಲವರಿತೆ ದೈತ್ಯವಿಭುಗೆ | ಸಲ್ಲದೀ ಕಾರ್ಯ || ೧ || 231 ||

ಕಾಂಭೋದಿ - ಝಂಪೆ
ಮಡದಿಮಣಿ ನಿನ್ನೊಡನೆ ಹದನವಿದ ಮೊದಲು ನಾ |
ನುಡಿಯಲಿಲ್ಲೆಂದೆನುತ ಮನದಿ ||
ಪಡದಿರೌ ಖೇದವನು ಲೋಕೋತ್ತರದ ಕಾರ್ಯ |
ನಡೆಸಿ ಬಂದಪೆನು ಶೀಘ್ರದಲಿ || ೧ || 232 ||

ಕಾಂಭೋದಿ - ಏಕ
ಲೋಕೇಶನರಸಿಯನ್ನು |
ಲೋಕಮಾತೆ ಪಾರ್ವತಿಯನು |
ಕಾಕುತನದೊಳಾಶಿಸುವುದು | ಲೋಕೋತ್ತರವೇನು || ೧ || 233 ||

ಕಾಂಭೋದಿ - ಝಂಪೆ
ಸರ್ವೇಶ್ವರನುಯೆಂಬ ಗರ್ವವಡರಿರ್ಪುದಾ |
ಶರ್ವನಿಗೆ ಆ ಮದವನಿಳಿಸಿ ||
ಪಾರ್ವತಿಯ ಕೈವಶಕೆ ತಂದೆನಾದರೆ ನಾನೆ |
ಸರ್ವಲೋಕೈಕವಿಭುವಪ್ಪೆ || ೧ || 234 ||

ಕಾಂಭೋದಿ - ಏಕ
ಅಸುರ ಸಾರ್ವಭೌಮನೆಂಬ |
ಪೆಸರು ಸಾಲದೇನು ನಿನಗೆ ||
ವಿಷಕಂಠನೊಳು ಸೆಣಸಿ ಗೆಲ್ವ | ಎಸಕ ಶಕ್ಯವೆ || ೧ || 235 ||

ಕಾಂಭೋದಿ - ಝಂಪೆ
ಮಿತಿಯಿಲ್ಲ ಸಾಹಸಕೆ ಲೋಕದೊಳಗೆನ್ನುವಭಿ |
ಮತದ ಸಾಹಸಧನನು ನಾನು ||
ಅತಿ ಶೌರ್ಯದುರುಬೆಯಲಿ ಶಿತಿಕಂಠನನು ಗೆಲ್ದು |
ಸತಿಯ ಸವತಿಯ ಮಾಳ್ಪೆ ನಿನಗೆ || ೧ || 236 ||

ಕಾಂಭೋದಿ - ಏಕ
ಬಡ ಪತಂಗ ಜ್ವಲಿಸುವಗ್ನಿ |
ಯೊಡನೆ ಸೆಣಸುವಂದವಾಯ್ತು |
ಮೃಡನು ಲಯಾಧ್ಯಕ್ಷನೆಂಬ | ನುಡಿಯನರಿಯೆಯಾ || ೧ || 237 ||

ಭಾಮಿನಿ (ಅರ್ಧ)
ನಲ್ಲೆ ಭಯವನು ಬಿಟ್ಟು ಬಿಡು ನಾ |
ಬಲ್ಲೆನೆಲ್ಲವ ತಡೆಯದಿರು ಧುರ |
ದಲ್ಲಿ ಸೋಲಿಪೆನಾ ಕಪರ್ದಿಯನೆಂದೆನುತ ಪೊರಟ || ೧ || 238 ||

ಯುದ್ಧ ಪ್ರಯಾಣ

ಭೈರವಿ - ತ್ರಿವುಡೆ
ಪೊರಟರಾಗ ಖಳರು ಹಿಮ | ಗಿರಿಗೆ ಬೇಗ || ಪ ||
ತರ ತರಾಯುಧಗಳನು ಜಳಪಿಸು |
ತುರವಣಿಸುತಾರ್ಭಟಿಸುತಾಗಳೆ || ಅ. ಪ. ||
ಭರದಿ ಕೈಲಾಸವನು ಸಾರ್ದರು |
ನೆರವಿಯಲಿ ಮುನ್ನುಗ್ಗುತ ||
ಗಿರಿಗಡರಿ ಶಿವಗಣರನಂಜಿಸು |
ತರರೆ ಬಲು ಬೊಬ್ಬಿರಿಯುತ ||
ಧುರಕೆ ಬಂದೆವು ಬರಲಿ ಶಿವನೆಂ |
ದರಚಿ ಸಮರವ ಸಾರುತ ||
ಹರನೊಡನೆ ಹೋರಾಡಿ ಜೈಸುವೆ |
ವರೆಗಳಿಗೆಯೊಳಗೆನ್ನುತ || ೧ || 239 ||

ನಂದಿ ಮತ್ತು ನಮುಚಿಯರ ನಡುವೆ ಯುದ್ಧ

ಭೈರವಿ - ಅಷ್ಟ
ಘೋರ ದಾನವ ಕೇಳೆಲಾ | ವರ ಕೈಲಾಸ |
ಕೇರಿ ನೀ ಬಂದೆಯೆಲಾ ||
ನೀರ ಋಣವು ಹಿಂಗಲೀರೀತಿಯೊಳು ಬಂದೆ |
ಮಾರಾರಿಯೊಳು ಸೆಣಸೆ || ೧ ||

ಯಾರೆಲೊ ಬಡ ಬಸವ | ಬರಿದೆಯೇಕೊ |
ತೋರುವೆ ಪೌರುಷವ ||
ಹೋರಿಯು ಕೇಸರಿಯೊಳು ಚಲದಿಂದಲಿ |
ಹೋರಾಡಿ ಗೆಲ್ವುದುಂಟೆ || ೨ ||

ಹುಂಬನೀನರಿತುದಿಲ್ಲ | ಈ ನಂದೀಶ |
ನೆಂಬನ ಶಕ್ತಿಯೆಲ್ಲ ||
ಕೊಂಬಿನಗ್ರದಿ ಕುಟ್ಟಲೀಕ್ಷಣದೊಳು ನೀನು |
ಕುಂಭಿನಿಗುರುಳುವೆಯ || ೩ ||

ಬಿಡು ಬಿಡು ಹುಲುನಂದಿಯೆ | ಕೊಂಬುಗಳನ್ನು |
ಪಿಡಿದೆತ್ತಿ ನಾನೆಸೆಯೆ ||
ಮಿಡುಕುತ್ತ ನೀನತ್ತ ಉರುಳಲು ಕಾಲ್ಮುರಿ |
ದೊಡೆವುದು ಮುಸುಡು ಕೇಳು || ೪ || 243 ||

ಸುಂದ ಮತ್ತು ಭ್ರುಕುಟಿಯರ ನಡುವೆ ಯುದ್ಧ

ಶಂಕರಾಭರಣ - ಮಟ್ಟೆ
ಭಳಿರೆ ದನುಜ ವೀರನಾರೊ ತಿಳಿಯದಾದೆನು |
ಘಳಿಲನಿಂತು ತುಹಿನಗಿರಿಯನೇರಿದಾತನು ||
ಬಲವ ತೋರ್ಪ ಬಯಕೆಯೇನೊ ಗಳಹು ಬೇಗನೆ |
ಗೆಲುವ ಹಂಬಲವನು ಬಿಟ್ಟು ತೆರಳೊ ಗಮ್ಮನೆ || ೧ ||

ಕೇಳೊ ವಿಕಟಗಣವೆ ಸುಂದರೆಂಬರೆನ್ನನು |
ಕೋಳುಗೊಳಲು ಬಂದೆವೀ ಕೈಲಾಸಗಿರಿಯನು ||
ಶೂಲಿ ತಾನೆಲ್ಲಿರ್ಪ ಮೊದಲು ತೋರು ಅವನನು |
ಕಾಳಗದಲಿ ಗೆದ್ದು ಒಯ್ವೆನವನ ಸತಿಯನು || ೨ ||

ಬರಿದೆ ಸೊಕ್ಕು ನುಡಿದು ಸಾಯಬೇಡ ಕೇಳಲಾ |
ಉರಿವ ಜ್ವಾಲೆಯೊಡನೆ ಶಲಭದಾಟವರಿಯೆಲಾ ||
ಹರನ ಕಾಂಬುದಕ್ಕೆ ಮೊದಲು ಭ್ರುಕುಟಿಯೆನ್ನೊಳು |
ಉರುಬ ತೋರು ಖಳನೆ ಈಗ ರಣದ ಕಣದೊಳು || ೩ ||

ಬಣಗು ಭ್ರುಕುಟಿ ನಾಲಗೆಯನು ಬೀಸ ಬೇಡಲಾ |
ರಣ ಕಣದಲಿ ಸಮರಗೈವ ವಿವರವರಿವೆಯಾ ||
ಗಣದ ಜೊತೆಯೊಳಾಡಿ ಪಾಡಿ ಮರುಳುತನದಲಿ |
ಕುಣಿವ ಪರಿಯಿದಲ್ಲ ಬೇಡ ಯುದ್ಧವೆನ್ನಲಿ || ೪ || 247 ||

ಶಂಬರ ಮತ್ತು ಗಣಪರ ನಡುವೆ ಯುದ್ಧ

ಮಾರವಿ - ಏಕ
ಬಂದವನಾರೆಲೊ ಈ ಕೈಲಾಸಕೆ |
ಇಂದಿನವರೆಗಿಂತು ||
ಬಂದೆರಗಿದ ಭಟರಿಲ್ಲವೊ ಪೊಸತಿದು |
ಮಂದಮತಿಗಳೆಸಕ || ೧ ||

ಆನೆಯ ಮೊಗದಾತನೆ ಕೇಳೆಲವೋ |
ನಾನೇ ಶಂಬರನು ||
ದಾನವವಿಭುವಂಧಕನಿಗೆ ಸೋದರ |
ಮಾಣದೆ ಧುರವೀಯೊ || ೨ ||

ಶಂಬರ ಬಿಡು ಹುಲು ಜಂಭವ ಬಯಲಾ |
ಡಂಬರ ತೋರದಿರೊ ||
ಅಂಬರಕೇಣಿಯನಿಡುವಾ ನಿನ್ನಯ |
ದಂಭವ ನಿಲಿಸುವೆನು || ೩ ||

ಎಡರನ್ನೊಡರಿಸಿ ಕಾರ್ಯಗಳನ್ನುರೆ |
ಕೆಡಿಸುವೆ ನೀನೆಂದು ||
ನುಡಿದರು ನಮ್ಮಲಿ ನಡೆಯದು ವಿಘ್ನವ |
ನಡೆಸೈ ನಾ ಕಾಂಬೆ || ೪ || 251 ||

ವಾರ್ಧಕ
ಘೋರತರ ಸಂಗ್ರಾಮವಿಂತು ಮಸಗುತ್ತಲಿರೆ |
ವೀರ ಶಿವಗಣ ತತಿಯ ಹತಿಗಳಂ ತಾವ್ ತಾಳ |
ಲಾರದಾ ದಾನವರ ವಾರವಳಿಯುತ್ತಿರಲು ಅಂಧಕಂ ಚಿಂತೆಯಾಂತು ||
ಈ ರೀತಿಯೆಮ್ಮವರು ನಾಶವಪ್ಪರೆ ಜಯವು |
ಸಾರುವುದು ದುಸ್ತರವು ಆಚಾರ್ಯ ಕೃಪೆಯನ್ನು |
ಕೋರಿ ಭಜಿಸುದುವುಚಿತವೆಂದೆನುತ ಭಕ್ತಿಯಿಂ ನೆನೆದ ಶುಕ್ರಾಚಾರ್ಯನ || ೧ || 252 ||

ಶುಕ್ರಾಚಾರ್ಯನ ಆಗಮನ

ಸೌರಾಷ್ಟ್ರ - ತ್ರಿವುಡೆ
ಅಂಧಕನು ಬಲು ಭಕ್ತಿ ಭಾವದೊ |
ಳಂದು ಗುರುವನು ಸ್ಮರಿಸೆ ಕರುಣೆಯೊ |
ಳಂದು ಮೈದೋರುತ್ತ ಶಿಷ್ಯನೊ | ಲೆಂದನಾಗ || ೧ ||

ಏನಿದೇನಂಧಕನೆ ಎನ್ನನು |
ನೀನು ಸ್ಮರಿಸಿದೆಯೇಕೆ ಸಾಹಸ |
ವೇನನೆಸಗಿದೆ ಮುಖವಿದೇತಕೆ | ಮ್ಲಾನವಾಯ್ತು || ೨ ||

ಗುರುವೆ ಮನ್ನಿಪುದೆನ್ನ ನಿಮ್ಮೊಳು |
ಅರುಹದೀಪರಿ ಮುಂಬರಿದು ಶಂ |
ಕರನೊಳನುವರಗೈದೆ ನಾನವ | ನರಸಿಗಾಗಿ || ೩ ||

ಬವರದಲಿ ನಮ್ಮವರ ಹಲಬರ |
ಶಿವಗಣಂಗಳು ನಾಶ ಗೈದರು |
ಅವರ ಪುನರಪಿ ಬದುಕಿಸುವುದೈ | ದಯದೊಳಿಂದು || ೪ || 256 ||

ಕೇದಾರಗೌಳ - ಅಷ್ಟ
ಎಂದುದ ಕೇಳಿ ಶುಕ್ರಾಚಾರ್ಯನಾತಂಕ |
ದಿಂದಲಂಧಕಗೆಂದನು ||
ಮಂದಪ್ರಜ್ಞನ ತೆರದಿಂದೆಳಸುವುದುಂಟೆ |
ಇಂದುಧರನ ಸತಿಯ || ೧ ||

ಅರಿತೊ ಮೇಣರಿಯದ ಬಗೆಯೊ ಈ ಪರಿ ಮುಂದು |
ವರಿದುದೆನ್ನಯ ಕಜ್ಜವು ||
ಕರುಣದಿ ಕಡೆ ಹಾಯಿಸುವುದು ಕೈ ಪಿಡಿದೆಂದು |
ಎರಗಿದ ಗುರು ಪದಕೆ || ೨ ||

ಸಾಧುವಲ್ಲವು ನೀನು ಗೈದ ಕಾರ್ಯವದೀಗ |
ಆದುದಾಗಿಯೆ ಹೋಯಿತು ||
ಆ ದಿವ್ಯ ಮೃತಸಂಜೀವಿನಿಮಂತ್ರದಲಿ ಮೃತ |
ರಾದರನುಜ್ಜೀವಿಪೆ || ೩ || 259 ||

ಮೃತ ಸಂಜೀವಿನಿ ಪ್ರಯೋಗ

ವಾರ್ಧಕ
ಎಂದು ಮೃತ ಸಂಜೀವಿನೀ ಮಂತ್ರವನು ಜಪಿಸ |
ಲಂದು ನಿಮಿಷದಿ ಜೀವ ತೊಲಗಿರ್ದಸುರರೆಲ್ಲ |
ಬಂದರುಸಿರನು ತಳೆಯುತಿಮ್ಮಡಿಯ ಉತ್ಸಾಹದಿಂದ ಸಂದಣಿಗೊಡುತ ||
ಮುಂದೆ ನಡೆದಾಹವದ ಪರಿಯನೇನೆಂಬೆ ಭರ |
ದಿಂದ ಬಾಯ್ಕಳೆದು ಪ್ರಮಥರ ನುಂಗಿ ಜಠರದಲಿ |
ಬಂಧಿಸಿದರಾ ರಕ್ಕಸರು ಕೇಕೆ ಹಾಕುತ್ತ ವಿಜೃಂಭಿಸುತ್ತ ಮದದಿ || ೧ || 260 ||

ಭೈರವಿ - ಏಕ
ಮಡಿದಿಹ ರಕ್ಕಸರಿಂತು | ಅಸು |
ವಡೆಯುತ ಮದವನ್ನಾಂತು ||
ಬಿಡದೆ ಸೆಣಸುತಿರೆ ಕಂಡು | ಆ |
ಮೃಡನುರೆ ಕ್ರೋಧವಗೊಂಡು || ೧ ||

ಜೃಂಭಿಕೆಯ ಆವಿರ್ಭಾವ

ನಖದಿಂ ಸೃಜಿಸಿದನವನು | ಜೃಂ |
ಭಿಕೆಯೆನ್ನುವ ಕೃತ್ಯೆಯನು ||
ವಿಕಟಾಕಾರವ ತಳೆದು | ಸ |
ಮ್ಮುಖಕೈದಿದಳವಳಂದು || ೨ ||

ತಂದೆಯೆ ಸೃಜಿಸಿಹುದೇಕೆ | ಎ |
ನ್ನಿಂದ ಸಹಾಯವು ಬೇಕೆ ||
ಮುಂದಿಹ ಕಾರ್ಯಗಳೇನು | ನಲ |
ವಿಂದಲಿ ಪೇಳೈ ನೀನು || ೩ || 263 ||

ಸೌರಾಷ್ಟ್ರ - ತ್ರಿವುಡೆ
ಕೇಳು ಜೃಂಭಿಕೆ ಎಮ್ಮವರನಾ |
ಖೂಳ ರಕ್ಕಸರಾಹವದೊಳದೊ |
ಕೋಳುಗೊಂಡರು ನುಂಗಿ ನೊಣೆದರು | ಪೇಳಲೇನು || ೧ ||

ಒಡರಿಸಾ ಖಲರಿಂಗೆ ನೀನಡಿ |
ಗಡಿಗೆ ಆಕಳಿಕೆಯನು ಬಲು ತೂ |
ಕಡಿಕೆಯನು ಹೊರವಡಲಿ ಗಣರವ | ರೊಡಲಿನಿಂದ || ೨ ||

ಅಸುರಗುರು ಶುಕ್ರನನು ನಿರ್ಬಂ |
ಧಿಸುತ ಮಂತ್ರ ಪ್ರಭಾವವನು ನೀ |
ನಶಿಸು ಜವದಲಿ ನಿನ್ನ ಶಕ್ತಿಯ | ಎಸಕದಿಂದ || ೩ ||

ಎನೆ ಹಸಾದವು ಎಂದು ಜೃಂಭಿಕೆ |
ಘನ ಮಹಾರವಗೈಯುತಾಗಳೆ |
ದನುಜರಿದಿರಿಗೆ ಬಂದಳಾಯೆಂ | ದಣಕಿಸುತ್ತ || ೪ || 267 ||

ಆರ್ಯಸವಾಯಿ - ಏಕ
ಅಡಿಗಡಿಗಾಯೆಂದಾಕಳಿಸುತ ತೂ |
ಕಡಿಸುತ ಕಂಗೆಡಲಾ ಖಳರ ||
ಒಡಲಿಂದಲಿ ಹೊರ ಬಂದರು ಶಿವಗಣ |
ರೊಡನೆಯೆ ಸದೆದರು ದಾನವರ || ೧ ||

ಒತ್ತರಿಸಿಯೆ ಬರುವಾಕಳಿಕೆಯು ಅಕ |
ಟೆತ್ತಣದೆನ್ನುತ ಶುಕ್ರಾಖ್ಯ ||
ಮೃತ್ಯುವನುತ್ತರಿಸುವ ಮಂತ್ರಕೆ ಬಾ |
ಯೆತ್ತಲರಿಯದೆಯೆ ಹಿನ್ನಡೆದ || ೨ || 269 ||

ಕಾಂಭೋದಿ - ಝಂಪೆ

ಇಂದುಶೇಖರನ ಭಂಗಿಸಲಾರದೆಯೆ ಬಳಿಕ |
ಲಂಧಕಂ ತನ್ನಾಪ್ತನೆನಿಪ ||
ಸುಂದನನು ಕರೆದೆಂದನೊಂದುಪಾಯವ ಹೂಡ |
ಲೆಂದು ಯೋಚಿಸಿಹೆ ನಾನಿಂದು || ೧ ||

ಹರನ ವೇಷವ ನಾನು ತಳೆಯುವೆನು ನಂದಿಕೇ |
ಶ್ವರನಾಗಿ ನೀನುಯೆನ್ನೊಡನೆ ||
ಬರಲಹುದು ಶರ್ವಾಣಿಯೆಡೆಗೈದಿ ಕೈತವದಿ |
ಮರುಳುಗೈವುದು ಅವಳ ಮನವ || ೨ ||

ಆಗಲದಕೇನೆಂದು ಸುಂದನೊಡನೆಯೆ ತಾನು |
ಸೋಗ ತಳೆದನು ನಂದಿಯಂತೆ ||
ಭೋಗಿಭೂಷಣ ವೇಷವಾಂತನಂಧಕನಾಗ |
ಸಾಗಿದರು ಬೇಗ ಶಿವೆಯೆಡೆಗೆ || ೩ || 272 ||

ಮಾಯಾಶಿವನ ಆಗಮನ

ಸಾಂಗತ್ಯ - ರೂಪಕ

ಬಂದಾತ ಶಿವನಲ್ಲವೆಂದರಿಯುತ ಶಿವೆ |
ಯೆಂದಳು ಸಮರವನುಳಿದು ||
ಬಂದೆಯೇತಕೆಯೆನೆ ಕಪಟ ಕಪರ್ದಿ ತಾ |
ನೆಂದನು ನಗುತಪರ್ಣೆಯೊಳು || ೧ ||

ಮನದನ್ನೆ ಕೇಳನುವರದಿ ದನುಜರನ್ನು |
ಹನನಗೈದೆನು ಶೌರ್ಯದಿಂದೆ ||
ತನುವಿಂಗೆ ಆಯಾಸವಡರಿದೆ ನಿನ್ನಯ |
ಸನಿಯಕೆ ಬಂದೆ ವಿಶ್ರಮಿಸೆ || ೨ ||

ಅಹುದಹುದಮ್ಮ ದೇವರು ದನುಜರಲಿ ಕಾ |
ದಿಹ ಪರಿಯೇನನೊರೆವೆನು ||
ಬಹುಮಂದಿ ದಡಿಗರ ರಣಕಣದೊಳಗೆ ನಿ |
ಗ್ರಹಿಸಿ ಆಯಾಸ ಪೊಂದಿಹರು || ೩ ||

ಎನಲುಮೆಯೆಂದಳು ದಣಿವೆಂಬುದಣಕವೆಂ |
ದೆಣಿಸುವೆನೆಂದೆನೆ ಪೇಳ್ದ ||
ಇನಿಯಳೆ ನಿನ್ನಾಣೆ ಕಳೆವೆ ಶ್ರಮವನಾಲಿಂ |
ಗನದಿಂದಲೀಕ್ಷಣ ದಿಟವು || ೪ || 276 ||

ಶಂಕರಿಯ ಶಮೀಪ್ರವೇಶ

ಭಾಮಿನಿ
ಎಂದು ಕಪಟ ಕಪಾಲಿ ಕಣ್ಗಳ |
ಲಂದು ಸೂಸುತ ಕಾಂಕ್ಷೆಯನು ನಲ |
ವಿಂದ ಗಿರಿಜೆಯ ಬಂಧಿಸುವೆ ಬಾಹುಗಳಲೆಂದೆನುತ ||
ಮುಂದುವರಿಯೆ ವಿನಾಶ ಕಾಲವು |
ಮಂದಮತಿ ಮೋಹಾಂಧಯೆನ್ನುತ |
ಸ್ಕಂದಜನನಿಯು ಶಮಿಯ ವೃಕ್ಷವನೊಂದಿದಳು ಕ್ಷಣದಿ || ೧ || 277 ||

ಕಾಂಭೋದಿ - ಝಂಪೆ
ಗಿರಿಜೆ ಮೈಗರೆಯಲಂಧಕನು ನಿಜವೇಷವನು |
ಧರಿಸುತಬ್ಬರಿಸಿ ತಾನೆಂದ ||
ಮರವಾದೆಯೇನೆಲೆ ಮರಾಳಗಮನೆಯೆ ನಿನ್ನ |
ಬರಿದೆ ಬಿಡುವವನಲ್ಲ ನಾನು || ೧ ||

ನೆಟ್ಟನೆಯೆ ಕಿತ್ತೊಯ್ವೆ ತರುವನುದ್ಯಾನದಲಿ |
ನೆಟ್ಟು ಪೋಷಿಪೆನೆಂದು ದನುಜ ||
ಅಟ್ಟಹಾಸದಿ ಶಮಿಯ ಸಾರಲಭವನು ತಾನೆ |
ತಟ್ಟನೆಯೆ ಮೈದೋರ್ದನಲ್ಲಿ || ೨ || 279 ||

ಶಿವ ಮತ್ತು ಅಂಧಕರ ನಡುವೆ ಯುದ್ಧ

ಮಾರವಿ - ಏಕ
ಮರುಳು ಮದಾಂಧನೆ ಶೌರ್ಯವನುಳಿದೀ |
ಪರಿ ಕೈತವದಿಂದ ||
ಕಿರುಕುಳವೀವರೆ ಅಲ್ಪತೆ ದನುಜರ |
ದೊರೆಗಿದು ಶೋಭಿಪುದೇ || ೧ ||

ಹರ ಕೇಳ್ಮೈ ಸಾಗರಮಥನದೊಳಸು |
ರರ ವಂಚಿಸಿ ಹರಿಯು ||
ಸುರರಿಗೆ ಸುಧೆಯನು ನೀಡಲು ತಡೆದೆಯ |
ಕರುಣಿಯು ನೀನಾಗೆ || ೨ ||

ಸುಧೆಯನು ಸವಿಯುವ ಯೋಗ್ಯತೆಯದ ನೀವ್ |
ಮೊದಲಲಿ ಪಡೆಯದೆಲೆ ||
ಸದಮಲ ಪೀಯೂಷವು ದಕ್ಕುವುದೇ |
ಮದಮುಖರಾಗಿರಲು || ೩ ||

ಅಗಜೆಯನಾಳುವ ಯೋಗ್ಯತೆಯಿಹುದೇ |
ವಿಗಡ ವಿರೂಪನಿಗೆ ||
ಜಗದೊಳಗಾಕೆಯ ಯೋಗ್ಯತೆಗಾನೇ |
ಮಿಗೆ ತಕ್ಕವ ಕೇಳೊ || ೪ ||

ದುರ್ಬುದ್ಧಿಯ ನುಡಿಯಾಡಲು ಬೇಡೆಲೊ |
ಕೊಬ್ಬಿದ ದಾನವನೆ ||
ಅಬ್ಬರವನು ಚಣ ಮಾತ್ರದಿ ನಿಲಿಸುವೆ |
ಮಬ್ಬಿಗ ಕೇಳೆಲವೊ || ೫ ||

ಕುಲದೇವನುಯೆಂದೊಲಿದು ಭಜಿಸೆ ನೀ |
ನುಳಿಸಿದೆಯೇನೆಮ್ಮ ||
ಕುಲದಳಿವಿಗೆ ಕಾರಣನೆನಿಸಿದೆ ನೀ |
ನುಳಿಯಬಹುದೆ ಪೇಳು || ೬ ||

ಶುದ್ಧ ಮನದಿ ಭಜಿಸುವ ಭಕ್ತರ ನಾ |
ನುದ್ಧರಿಸುವೆ ಸತತ ||
ಸದ್ದಡಗಿಪೆನು ಮದಾಂಧರ ಕೇಳಿದು |
ಬದ್ಧವು ನೀ ತಿಳಿಯೊ || ೭ ||

ಅಡಗಿಸುವೆನು ನಿನ್ನಾಟವನೆನ್ನುತ |
ದಡಿಗನು ಕಿಡಿಗೆದರಿ ||
ಮೃಡನ ಶಿರಕೆ ಗದೆಯಿಂದಲಿ ಚಳಕದಿ |
ಬಡಿಯಲ್ಕೇನೆಂಬೆ || ೮ ||

ಭೈರವನ ಉದ್ಭವ

ಉದುರಲು ರಕ್ತದ ಬಿಂದುವಿನಿಂದಲಿ |
ಅದುಭುತ ರೂಪದಲಿ ||
ಉದುಭವಿಸಿದ ಭೈರವ ಮೂರ್ತಿಯು ಕಿಡಿ |
ಗೆದರುತ ಕಂಗಳಲಿ || ೯ || 288 ||

ಸೌರಾಷ್ಟ್ರ - ತ್ರಿವುಡೆ
ಸಿಡಿಲಿನಂದದಿ ಗುಡುಗುಡಿಸುತಾ |
ಕಡು ಭಯಂಕರ ಮೂರ್ತಿ ಮತ್ತಾ |
ದಡಿಗ ದಾನವನಿದಿರು ಹಾಯ್ದನು | ಘಡ ಘಡೆನುತ || ೧ ||

ಹಲ್ಲಗಡೆಯುತಲೆಂದ ನಿಲ್ಲೆಲೊ |
ಖುಲ್ಲ ಖಳ ನಿನ್ನಾಟವನು ಚಣ |
ದಲ್ಲಿ ನಿಲಿಸುವೆ ತರಿದು ರಕುತವ | ಚೆಲ್ಲುತಾಗ || ೨ ||

ಎಲವೊ ಭೂತವೆ ನಿನ್ನ ಬೆದರಿಕೆ |
ಗಳನು ಕಟ್ಟಿಡು ನಿನ್ನ ಶಕುತಿಯ |
ಬಲುಮೆ ತೋರೆನೆ ತಿವಿದ ಶೂಲದ | ಅಲಗಿನಿಂದ || ೩ ||

ಅಂಧಕಾರ ನಿರ್ಮಾಣ

ಗಾಸಿಗೊಳ್ಳದೆ ದನುಜ ಮಾಯೆಯ |
ಬೀಸಲಾಕ್ಷಣ ಅಂಧಕಾರದ |
ರಾಶಿ ಕಪ್ಪನೆ ಮುಸುಕಿದುದು ಕೈ | ಲಾಸವನ್ನು || ೪ ||

ಕಾರ ಕತ್ತಲೆ ಕವಿಯಲಾಗ ಕು |
ಮಾರ ತನ್ನಯ ದಿವ್ಯಮಣಿಯಿಂ |
ಘೋರನೆಯೆ ತಮವನ್ನು ಜವದಿ ನಿ | ವಾರಿಸಲ್ಕೆ || ೫ || 293 ||

ಅಂಧಕ ಮತ್ತು ಕುಮಾರರ ನಡುವೆ ಯುದ್ಧ

ಸೌರಾಷ್ಟ್ರ - ತ್ರಿವುಡೆ
ಆರು ನೀನೆಲೊ ಪೋರ ಮಣಿಯನು |
ತೋರುತೀ ಪರಿಯಂಧಕಾರದಿ |
ಬೀರಿ ಬೆಳಕನು ಬರ್ಪೆ ಶೌರ್ಯವ | ತೋರುತೀಗ || ೧ ||

ತಾರಕಾಂತಕನಾರುಯೆಂಬ ವಿ |
ಚಾರವನು ನೀನರಿಯೆಯಾ ಮದ |
ವೇರಿ ಮಾರ್ಮಲೆಯಲ್ಕೆ ನಾ ಯಮ | ನೂರ ತೋರ್ಪೆ || ೨ ||

ತಾರಕಾಸುರನನ್ನು ಕೊಂದ ಕು |
ಮಾರ ನೀನೆಯೊ ಭಳಿರೆ ಸಿಕ್ಕಿದೆ |
ಆರಲಾರದ ವೈರ ಭಾವವ | ಪೂರವಿಸುವೆ || ೩ ||

ಒದರ ಬೇಡೆಲೊ ಜಗದಿ ಸದ್ದ |
ರ್ಮದ ನಾಶವನೆಸಗಿ ಮಲೆತಿಹ |
ಮದಮುಖನೆ ನಿನ್ನುಧಟನೀಕ್ಷಣ | ಸದೆವೆ ಕೇಳು || ೪ || 297 ||

ಶುಷ್ಕ ರೇವತೀ ಪ್ರಯೋಗ

ವಾರ್ಧಕ

ಮತ್ತೆ ತಾನಿದಿರಾದನಂಧಕಂ ಶೌರ್ಯದೊಳು |
ಕೃತ್ತಿವಾಸನ ಕೂಡೆ ಹಳಚುತ್ತಲಿರಲಭವ |
ಚಿತ್ತದೊಳು ಯೋಚಿಸಿದನಿವನ ದೇಹವ ಮೃತ್ಯು ಕೊಳ್ಳದದರಿಂದಲೀಗ ||
ಬತ್ತಿಸುವೆನಿವನ ದೇಹದ ರಕ್ತ ಮಾಂಸವನೆ |
ನುತ್ತ ಶ್ರೀಹರಿದತ್ತ ಶುಷ್ಕ ರೇವತಿಯೆಂಬ |
ಅಸ್ತ್ರದಿಂ ಘಾತಿಸಲು ಬಿದ್ದನಸುರಂ ಧಾತುಗುಂದಿ ಧಾರಿಣಿಗಾಕ್ಷಣ || ೧ || 298 ||

ಮೋಹನ - ರೂಪಕ

ಭೂರಿಗಾತ್ರದೊಳಿರ್ದ ರಸ ರಕ್ತ ಮಾಂಸಾದಿ |
ಸಾರವನೆಲ್ಲವ ಬಿಡದೆ ||
ಹೀರಲಸ್ತ್ರವು ಖಳನಸ್ಥಿಪಂಜರದಂತೆ |
ತೋರಿದ ಶುಷ್ಕತೆವಡೆದು || ೧ ||

ತನುವಿನ ಧಾತುಗಳಿಂಗಲು ಪಾಪವಾ |
ಸನೆ ತೊಲಗಿತು ಮನದಿಂದ ||
ಘನ ಮೋಹ ಗರ್ವಾದಿ ದುರ್ಗುಣವೆಲ್ಲವು |
ಒಣಗಿ ಪೋದುದು ದೇಹದೊಡನೆ || ೨ ||

ಜ್ಞಾನೋದಯ

ಅಂಧಕನಾತ್ಮವ ಆವರಿಸಿರ್ದಂಥ |
ಅಂಧಕಾರವು ನಾಶವಾಗೆ ||
ಬೆಂದು ಪಶ್ಚಾತ್ತಾಪದಿಂದ ಶುದ್ಧಾತ್ಮ ತಾ |
ನೆಂದೆನಿಸಿದ ಜ್ಞಾನವುದಿಸಿ || ೩ ||301 ||

ಭೂಪಾಳಿ - ಅಷ್ಟ

ಜಯ ನಮೋ ಶ್ರೀ ಗೌರೀಲೋಲ | ದಯಾ |
ಮಯ ಚರಣಾಶ್ರಿತಪಾಲ | ಭವ |
ಭಯಹರ ವರ ರುಂಡಮಾಲ | ಚಿ |
ನ್ಮಯನೆ ಮಾಯಾವಶನಾಗಿ ನಾನತಿ ಮೂಢ |
ತೆಯಲಿ ಜಗನ್ಮಯೆಗೆಳಸಿದೆನಕಟಾ || ೧ ||

ಲೋಕೇಶನಪ್ಪ ಹಂಬಲದಿ | ದುಷ್ಟ |
ಆಕಾಂಕ್ಷೆಯನು ಪೊಂದಿ ಮನದಿ | ಬಲು |
ಕಾಕು ಬುದ್ಧಿಯ ಮೂರ್ಖತನದಿ | ಆ |
ಲೋಕ ಮಾತೆಗೆ ತಪ್ಪಿ ನಡೆದೆ ಮನ್ನಿಪುದು ಪಿ |
ನಾಕಿಯೆ ನಾಂ ಗೈದ ಸರ್ವಾಪರಾಧವ || ೨ || 303 ||

ಮೋಹನ - ತ್ರಿವುಡೆ (ಸೌರಾಷ್ಟ್ರ - ತ್ರಿವುಡೆ)
ಎನುತ ಪಶ್ಚಾತ್ತಾಪದಿಂದಲೆ |
ದನುಜನಭವನ ಪದದಿ ಪೊರಳಲು |
ತ್ರಿಣಯ ಮೈದಡವುತ್ತಲೆಂದನು | ಅನುನಯದಲಿ || ೧ ||

ದೈತ್ಯನಾಯಕ ನಿನ್ನ ಹೃದಯದ |
ಕತ್ತಲೆಯು ಹರಿದೋಡಿ ನೀ ಶು |
ದ್ಧಾತ್ಮನಾಗಿಹೆ ಬಯಕೆಯೇನಿದೆ | ಚಿತ್ತದೊಳಗೆ || ೨ ||

ಲಾಲಿಸೆಲೆ ನಟರಾಜ ಮೂರುತಿ |
ಲೀಲೆಯಿಂದೆನ್ನೆದೆಯ ರಂಗದ |
ಮೇಲೆ ನೀ ಮನದಣಿಯೆ ನರ್ತಿಸೆ | ಬಾಳು ಧನ್ಯ || ೩ ||

ಕರುಣ ನಿಧಿ ತವ ದಿವ್ಯ ನಾಮದ |
ಸ್ಮರಣೆ ಮನದೊಳಗಿರಲಿ ನಿತ್ಯವು |
ಚರಣ ಸೇವೆಯ ಭಾಗ್ಯ ದೊರೆಕೊಳೆ | ಚಿರ ಕೃತಾರ್ಥ || ೪ ||

ನಿನ್ನ ವಾಂಛೆಯು ಸಲಲಿ ಭೃಂಗಿಯು |
ಎನ್ನುವಾ ರೂಪದಲಿ ನಿನ್ನನು |
ಎನ್ನ ಗಣಮುಖ್ಯನನು ಗೈವೆನು | ಇನ್ನು ಮುಂದೆ || ೫ ||

ಅಂಧಕವಕ್ಷದಲ್ಲಿ ಅಭವನ ನಾಟ್ಯ

ಎಂದು ಸಮ್ಮುದದಿಂದ ಶಂಕರ |
ನಂಧಕನ ವಕ್ಷದಲಿ ಬಲುವಿಧ |
ದಿಂದ ನರ್ತಿಸಿ ರಾಕ್ಷಸತ್ವವ | ನಂದು ಕಳೆದ || ೬ ||

ತ್ರಿಣಯನಾತಗೆ ಭೃಂಗಿಯೆನುವಾ |
ಗಣ ಪದವಿಯನ್ನಿತ್ತು ಮನ್ನಿಸ |
ಲನುಪಮದ ಸಂಭ್ರಮದೊಳಿರ್ದನು | ಮಣಿದು ಹರಗೆ || ೭ || 310 ||

ಮಂಗಲ ಪದ
ಮೋಹನ - ರೂಪಕ
ಹೃದಯದ ಕ್ಷೇತ್ರದೊಳೊಗೆಯುವ ದುಷ್ಕರ |
ಮದ ಮೋಹ ಭ್ರಾಂತಿಯ ಸದೆದು ||
ಎದೆಯ ರಂಗದಿ ನಾಟ್ಯವಾಡುವ ಲಯತತ್ತ್ವ |
ವದಕೆ ಮಂಗಲವಕ್ಕೆ ಸತತ || ೧ || 311 ||

*****ಶುಭಂ*****

ಕೃತಜ್ಞತೆಗಳು

ಅಂತರಜಾಲ ಪ್ರಕಾಶನ ಪ್ರಾಯೋಜಕರು: ನಿರೀಕ್ಷಿಸಲಾಗಿದೆ

ಮೂಲ ಪ್ರಕಾಶಕರು: ಪ್ರಕೃತಿ ಪ್ರಕಾಶನ, ಕೋಟೆಕಾರು - ೧೯೯೦

ಪ್ರಸಂಗ ಪ್ರತಿ ಆಧಾರ: ಪ್ರಕೃತಿ ಪ್ರಕಾಶನ ಪ್ರಕಟಿತ ಪ್ರತಿ

ಪ್ರಸಂಗ ಪ್ರತಿ ಕೊಟ್ಟವರು: ಸಂಚಿ ಫೌಂಡೇಶನ್ ಹಾಗೂ ಸಂಚಯ ಸಂಸ್ಥೆಯಿಂದ archive.org ಲಭ್ಯ ಪ್ರತಿ

ಪ್ರಸಂಗ ಪ್ರತಿ ಒದಗಣೆಗೆ ಸಹಕಾರ: archive.org

ಅಂತರಜಾಲ ಪ್ರತಿ ಬರವಣಿಗೆ: ಗಣಪತಿ ಭಟ್ ನೆಲ್ಯಾಡಿ

ಅಂತರಜಾಲ ಪ್ರತಿ ವಿನ್ಯಾಸ: ದಿನೇಶ ಉಪ್ಪೂರ, ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

ಅಂತರಜಾಲ ಪ್ರತಿ ತಿದ್ದುಪಡಿ: ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ: ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ